ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 9
೨೯ ಡಿಸೆಂಬರ್ ೧೯೬೨
★
ಪುಟ ೧೦ ಬೆಲೆ: ೧೩ ನ. ಪೈಸೆ

ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಭಾರೀ ಸೋಲು

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಇದೇ ಡಿಸೆಂಬರ್ 22ರಂದು ನಡೆದ ಮುನಿಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಭಾರಿ ಸೋಲು ಉಂಟಾಗಿದೆ. ಕಾಂಗ್ರೆಸ್ಸಿಗೆ ಈವರೆಗೆ ಮುನಿಸಿಪಾಲಿಟಿಯಲ್ಲಿದ್ದ ಗುತ್ತೇದಾರೀ ಈ ಬಾರಿ ಚುನಾವಣೆಗಳಲ್ಲಿ ಮುರಿದಿದೆ. ಸಾರ್ವತ್ರಿಕ ಚುನಾವಣೆಗಳ ನಂತರ ನಡೆಯುತ್ತಿರುವ ಈ ಚುನಾವಣೆಗಳು ನಗರದ ನಾಗರಿಕ ಜೀವನದಲ್ಲಿ ಮಹತ್ವವಾದದ್ದಾಗಿದೆ.

ಬೆಂಗಳೂರು ಕಾರ್ಪೊರೇಷನಿನಲ್ಲಿ

ಬೆಂಗಳೂರು ಕಾರ್ಪೊರೇಷನ್ನಿಗೆ ಇರುವ 70 ಸ್ಥಾನಗಳ ಪೈಕಿ ಕಾಂಗ್ರೆಸ್ಸು ಅವಿರೋಧವಾಗಿ 12 ಸ್ಥಾನಗಳನ್ನೂ ನಾಗರಿಕ ಸಂಯುಕ್ತರಂಗವು ಒಂದು ಸ್ಥಾನವನ್ನು ಗಳಿಸಿತು. ಉಳಿದ 52 ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆಯಿತು. ಇನ್ನು 5 ಸ್ಥಾನಗಳು ಆಲ್ಡರ್‌ಮನ್ ಸ್ಥಾನಗಳಿಗೆ ಮಾತ್ರ ಇವೆ. ಚುನಾವಣೆಗಳ ಫಲಿತಾಂಶ ಪೂರ್ಣವಾಗಿದ್ದು ಕಾಂಗ್ರೆಸ್ಸಿಗೆ 24 ಸ್ಥಾನಗಳೂ ವಿರೋಧ ಪಕ್ಷಗಳಿಗೆ 26 ಸ್ಥಾನಗಳೂ ದೊರಕಿವೆ. ಕಾರ್ಮಿಕ ಕ್ಷೇತ್ರದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಒಂದು ಸ್ಥಾನವೂ ನಾಗರಿಕ ಸಂಯುಕ್ತ ರಂಗಕ್ಕೆ ಮೂರು ಸ್ಥಾನವೂ ಈ ಹಿಂದೆಯೇ ದೊರಕಿತ್ತು.

ನಾಗರಿಕ ಸಂಯುಕ್ತರಂಗದ ವಿಜಯ

ವಿರೋಧ ಪಕ್ಷಗಳ ಪೈಕಿ ಕಮ್ಯೂನಿಸ್ಟ ಪಕ್ಷ, ರಿಪಬ್ಲಿಕನ್ ಪಕ್ಷ. ಮತ್ತು ಸ್ವತಂತ್ರರನ್ನೊಳಗೊಂಡ ನಾಗರಿಕ ಸಂಘವು ಸಾರ್ವತ್ರಿಕ ಕ್ಷೇತ್ರದಲ್ಲಿ 10 ಸ್ಥಾನಗಳಿಗೆ ಸ್ಪರ್ಧಿಸಿತ್ತು ಮತ್ತು 12 ಸ್ಥಾನಗಳಲ್ಲಿ ಸ್ವತಂತ್ರ ಉಮೇದುವಾರರಿಗೆ ಬೆಂಬಲವಿತ್ತಿದ್ದಿತು. ಇವುಗಳಲ್ಲಿ ನಾಗರಿಕ ಸಂಯುಕ್ತ ರಂಗವು 16 ಸ್ಥಾನಗಳಲ್ಲಿ ಜಯಗಳಿಸಿದೆ. ಬೆಂಗಳೂರು ಸಿಲ್ಕ್ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಸಾಮಾನ್ಯ ಸಿಲ್ಕ್ ಕೆಲಸಗಾರ ಶ್ರೀ ಸಿದ್ದಪ್ಪನವರು ಆರಿಸಿ ಬಂದಿರುವುದು ಗಮನಾರ್ಹವಾಗಿದೆ ನಾಗರಿಕ ಸಂಯುಕ್ತರಂಗವು ಕಳೆದ ಚುನಾವಣೆಗಳಲ್ಲಿಯೂ ಸಹ ಗಣನೀಯವಾದ ವಿಜಯವನ್ನು ಸಾಧಿಸಿದ್ದು ಈ ಬಾರಿ ಹೆಚ್ಚಿನ ವಿಜಯವನ್ನು ಗಳಿಸಿದೆ. ನಾಗರಿಕ ಸಂಯುಕ್ತರಂಗದ ಹಾಲಿ ಕೌನ್ಸಿಲರುಗಳಾಗಿದ್ದ ಶ್ರೀ ಎ. ನಾಗೇಶ ರಾವ್ ಮತ್ತು ಕೆ. ವಜ್ರವೇಲುರವರು ಅಲ್ಪ ಮತಗಳ ವ್ಯತ್ಯಾಸದಲ್ಲಿ ಪರಾಭವ ಹೊಂದಿದ್ದು ಸಂಯುಕ್ತ ರಂಗಕ್ಕೆ ನಷ್ಟವಾಗಿದೆ ಎಂದು ಹೇಳ

ಕಾಂಗ್ರೆಸ್ಸಿನ ಸ್ಥಾನ

ಕಳೆದ ಕಾರ್ಪೊರೇಷನ್ ಸಭೆಯಲ್ಲಿ ಕಾಂಗ್ರೆಸು 52 ಸ್ಥಾನಗಳನ್ನು ವಿರೋಧ ಪಕ್ಷಗಳು ಕೇವಲ 18 ಸ್ಥಾನಗಳನ್ನು ಪಡೆದಿತ್ತು ಆದರೆ ಈ ಬಾರಿ ಅದರ ಶಕ್ತಿ ಅರ್ಧಕ್ಕೆ ಇಳಿದಿದೆ. ವಿರೋಧ ಪಕ್ಷದ ಸಂಖ್ಯೆಯು ಎರಡರಷ್ಟಾಗಿದೆ. ವಿರೋಧ ಪಕ್ಷಗಳವರು ಈ ಬಾರಿ ಕಾಂಗ್ರೆಸ್ಸಿಗಿಂತ 30 ಸಾವಿರ ಮತಗಳನ್ನು ಹೆಚ್ಚಿಗೆ ಗಳಿಸಿದ್ದಾರೆ. ಕಾಂಗ್ರೆಸ್ಸಿಗೆ ಈ ಬಾರಿ ಒಟ್ಟು 88,900 ಮತಗಳು, ವಿರೋಧ ಪಕ್ಷಗಳಿಗೆ 1,19,900 ಮತಗಳು ದೊರಕಿವೆ. ಜನತೆಯಲ್ಲಿ ಕಾಂಗ್ರೆಸ್ಸಿನ ನೀತಿಗಳಿಗೆ ಬೆಳೆಯುತ್ತಿರುವ ವಿರೋಧಕ್ಕೆ ಇದು ನಿದರ್ಶನವಾಗಿದೆ.

ಗಮನಾರ್ಹವಾದ ಮತ್ತೊಂದು ಅಂಶವೇದರೆ ಈ ಬಾರಿ ಕಾಂಗ್ರೆಸ್ಸಿಗೆ ನಗರದ ದಂಡಿನ ಪ್ರದೇಶದಲ್ಲಿ ಸಂಪೂರ್ಣವಾದ ಸೋಲಾಗಿರುವುದು ದಂಡಿನ ಪ್ರದೇಶದಲ್ಲಿ ಕಾಂಗ್ರೆಸ್ಸಿಗೆ ದೊರೆತದ್ದು. ಕೇವಲ ಒಂದು ಸ್ಥಾನ ಮಾತ್ರ.

ಮೈಸೂರು ನಗರದಲ್ಲಿ ಕಾಂಗ್ರೆಸ್ಸಿನ ಸೋಲು

ಮೈಸೂರು ನಗರದಲ್ಲಿ ಮುನಿಸಿಪಾಲಿಟಿಗೆ ಇರುವ 32 ಸ್ಥಾನಗಳಿಗೆ ಚುನಾವಣೆಯು ನಡೆದಿದ್ದು, ಕಾಂಗ್ರೆಸ್ಸಿಗೆ ಬಹುದೊಡ್ಡ ಸೋಲಾಗಿದೆ. ಕಾಂಗ್ರೆಸಿಗೆ ಮೈಸೂರು ಮುನ್ಸಿಪಾಲಿಟಿಯಲ್ಲಿ ಬಹುಮತವೇನೋ ದೊರೆತಿದ್ದರೂ, ಭಾರೀ ಸೋಲಾಗಿದೆ. ಕಾಂಗ್ರೆಸ್ಸಿಗೆ 17 ಸ್ಥಾನ ದೊರಕಿದೆ, ಐದು ಮಂದಿ ಹಾಲಿ ಕಾಂಗ್ರೆಸ್ ಕೌನ್ಸಿಲರುಗಳು ಸೋತಿದ್ದಾರೆ. ವಿರೋಧ ಪಕ್ಷಗಳ ಪೈಕಿ ಪ್ರ ಸ.ವ. ಪಕ್ಷಕ್ಕೆ 6 ಸ್ಥಾನಗಳೂ, ಸೋಷಲಿಸ್ಟ ಪಕ್ಷಕ್ಕೆ 2 ಸ್ಥಾನಗಳೂ, ಕಮ್ಯೂನಿಸ್ಟ ಪಕ್ಷಕ್ಕೆ ಒಂದು ಸ್ಥಾನವೂ, ಸ್ವತಂತ್ರರು ಐವರೂ ಆಯ್ಕೆಯಾಗಿದ್ದಾರೆ. ಕಾಂಗ್ರೆಸಿಗೆ ಈ ಬಾರಿ ಕೇವಲ ಅಲ್ಪ ಬಹುಮತ ದೊರೆತಿದೆ. ವಿರೋಧ ಪಕ್ಷಗಳ ಸದಸ್ಯರುಗಳು ಕೇವಲ ಕೆಲವೇ ಮತಗಳಿಂದ ಪರಾಜಿತರಾಗಿದ್ದಾರೆ. ಈ ಸಲದ ಚುನಾವಣಾ ಕ್ಷೇತ್ರಗಳು ಬಹು ಸದಸ್ಯ ಕ್ಷೇತ್ರವಾಗಿದ್ದು, ಮತದಾನ ಪದ್ಧತಿಯಲ್ಲಿ ಗುರ್ತು ಮಾಡುವ ಪದ್ಧತಿ ಇದ್ದು ಅನೇಕ ಮತಗಳು ವ್ಯರ್ಥವಾದುವು. ಮೈಸೂರು ನಗರ ಮುನ್ಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಸ್ವಾತಂತ್ರ್ಯ ನಂತರ

ವಿರೋಧ ಪಕ್ಷಗಳೆಲ್ಲವೂ ತಮ್ಮ ಸ್ಥಾನಗಳನ್ನು ಉತ್ತಮಗೊಳಿಸಿಕೊಂಡಿವೆ. ಕಮ್ಯೂನಿಸ್ಟ ಪಕ್ಷವು ಮೂರು ಸ್ಥಾನಗಳಿಗೆ ಮಾತ್ರ ಸ್ಪರ್ಧಿಸಿದ್ದು ಒಂದು ಸ್ಥಾನ ಗಳಿಸಿದೆ. ಆರಿಸಿಬಂದವರು ಮೈಸೂರಿನ ಕಮ್ಯೂನಿಸ್ಟ ಮುಖಂಡರಾದ ಶ್ರೀ ಸೋಮಸುಂದರ ಶರ್ಮ ಇವರು. ಉಳಿದ ಇಬ್ಬರು ಉಮೇದುವಾರರುಗಳಾದ ಶ್ರೀ ಬೆಳ್ಳಿಯಪ್ಪ ಮತ್ತು ಉಗ್ರಪ್ಪ ಇವರುಗಳು ಬಹಳ ಅಲ್ಪ ಮತಗಳಿಂದ ಪರಾಜಿತರಾಗಿದ್ದಾರೆ. ವಿರೋಧ ಪಕ್ಷಗಳವರು ಈ ಬಾರಿ ಮೈಸೂರಿನಲ್ಲಿ ಮುನಿಸಿಪಾಲಿಟಿಯ ವ್ಯವಹಾರಗಳನ್ನು ಸುಧಾರಿಸಲು ಸತತವಾಗಿ ಶ್ರಮಿಸಲಿ.

ನಗರಸಭೆಯ ಕಾರ್ಯವು ಸುಧಾರಿತವಾಗಲಿ

ಕಾಂಗ್ರೆಸು ಈವರೆಗೆ ಮೈಸೂರು ಮತ್ತು ಬೆಂಗಳೂರು ಮುನಿಸಿಪಲ್ ವ್ಯವಹಾರಗಳಲ್ಲಿ ಗುತ್ತೇದಾರಿಯನ್ನು ಪಡೆದಿತ್ತು. ಲಂಚ ಖುಷುವತ್ತುಗಳು, ಸ್ವಜನ ಪಕ್ಷಪಾತ, ಪಕ್ಷದ ಒಳಜಗಳಗಳಿಂದ ನಾಗರಿಕ ಸೌಲಭ್ಯಗಳಿಗೆ ಗಮನವೀಯದೆ ನಗರ ಸಭೆಯ ವ್ಯವಹಾರವನ್ನೇ ಕಲುಷಿತಗೊಳಿಸಿತ್ತು. ಬಲವಾದ ವಿರೋಧ ಪಕ್ಷವಿಲ್ಲದೆ, ಕಾಂಗ್ರೆಸ್ಸಿನ ಅಟಾಟೋಪಕ್ಕೆ ಅಡಿಯೇ ಇಲ್ಲದಂತಾಗಿತ್ತು. ಈ ಬಾರಿಯ ಚುನಾವಣೆಗಳಲ್ಲಿ ಜನತೆ ತಮ್ಮ ಮತ ಚಲಾಯಿಸುವುದರಲ್ಲಿ ಅಷ್ಟು ಆಸಕ್ತಿ ವಹಿಸದೆ ಕೇವಲ ಶೇ. 50ಕ್ಕೂ ಕಮ್ಮಿ ಮತದಾನವಾಗಿದ್ದರೂ ಸಹ ಕಾಂಗ್ರೆಸ್ಸಿನ ದುರಾಡಳಿತಕ್ಕೆ ಪ್ರತ್ಯುತ್ತರವನ್ನಿತ್ತಿದ್ದಾರೆ. ವಿರೋಧ ಪಕ್ಷಗಳು ಐಕ್ಯದಿಂದ ಕೂಡಿದ್ದು ನಾಗರಿಕ ಸೌಲಭ್ಯಗಳನ್ನು ಒದಗಿಸಲು ನಗರ ಸಭೆಯಲ್ಲಿ ಹೋರಾಡಲು ಸದವಕಾಶ ಇಂದು ದೊರೆತಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವರೆಂದು ಆಶಿಸುತ್ತೇವೆ.

ಕಾರ್ಮಿಕ ಸಚಿವ ಬಾಳಿಗರವರು ಮಂಗಳೂರಿನಲ್ಲಿ!

ಕಾರ್ಮಿಕ ಮಂತ್ರಿ ಬಿ. ವಿ. ಬಾಳಿಗರವರು ಮಂಗಳೂರಿನವರು. ಮೊದಲಿಂದ ಸಾಹುಕಾರರ ಪರವಾಗಿ, ಕಾರ್ಮಿಕರ ವಿರೋಧವಾಗಿ, ವಕಾಲತು ವಹಿಸುತ್ತ ಬಂದವರು. ಕಾರ್ಮಿಕ ಮಂತ್ರಿಗಳಾದ ಮೇಲಾದರೂ ಕಾರ್ಮಿಕರ ಹಿತದ ಕಡೆಗೆ ಗಮನ ಕೊಡುವರೆಂದು ಯಾರಾದರು ಆಶೆ ಕಟ್ಟಿಕೊಂಡಿದ್ದರೆ, ಇಷ್ಟರಲ್ಲೇ ಅದನ್ನವರು ಮಣ್ಣುಗೂಡಿಸಿದ್ದಾರೆ. ತಮಗೆ ಸಂಬಂಧವಿಲ್ಲದ ವಿಷಯಗಳಲ್ಲೆಲ್ಲ ತುದಿಮೊದಲಿಲ್ಲದೆ ಭಾಷಣ ಬಿಗಿಯುವ ಈ ಸಚಿವೋತ್ತಮರು ತಮ್ಮ ಖಾತೆಯ ಕಾಗದಪತ್ರಗಳನ್ನೇ ನೋಡುವುದಿಲ್ಲ ಎಂದು ಹೇಳದೆ ವಿಧಿಯಿಲ್ಲ.

ಮಂಗಳೂರಲ್ಲಿ ಬಾಳಿಗಾರವರು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತ, "ಕಾರ್ಮಿಕ ಖಾತೆ ನಿದ್ರೆಯಲ್ಲಿದೆ ಎಂದು ಅನೇಕರು ಭಾವಿಸುತ್ತಾರೆ; ಅದು ಸರಿಯಲ್ಲ" ಎಂದರಂತೆ! ಮಾತೇನೂ ಸುಳ್ಳಲ್ಲ. ಬಾಳಿಗರವರ ಕಾರ್ಮಿಕ ಖಾತೆ ನಿಜವಾಗಿಯೂ ನಿದ್ರಿಸುತ್ತಿಲ್ಲ, ನಿದ್ದೆ ಬಂದಿರುವಂತೆ ನಟಿಸುತ್ತಿದೆ ಅಷ್ಟೆ. ನಿಜವಾಗಿ ನಿದ್ರಿಸುತ್ತಿರುವವರನ್ನು ಎಚ್ಚರಿಸಬಹುದು: ಆದರೆ ನಿದ್ರೆಯ ನಟನೆ ಹೂಡಿದವರನ್ನು ಎಚ್ಚರಿಸಲು ಸಾಧ್ಯವಿಲ್ಲ!

ಈಗಲೇ 80ಕ್ಕಿಂತ ಹೆಚ್ಚು ವಿವಾದಗಳೂ ಅನೇಕ ಅಪೀಲುಗಳೂ ಟ್ರಿಬ್ಯೂನಲ್ಲಿನ ಮುಂದೆ ತೀರ್ಮಾನವಾಗಲಿಕ್ಕೆ ಬಾಕಿ ಇವೆ. ಇನ್ನೂ ಎಷ್ಟೋ ವಿವಾದಗಳು ಟ್ರಿಬ್ಯೂನಲ್‌ಗೆ ಹೋಗದೆ ಉಳಿದಿವೆ. ಹೀಗಿದ್ದರೂ ಎರಡನೆಯ ಕೈಗಾರಿಕಾ ಟ್ರಿಬ್ಯೂನಲನ್ನು ಸ್ಥಾಪಿಸಲು ಬಾಳಿಗಾರವರ ಕಾರ್ಮಿಕ ಖಾತೆ ತಯಾರಿಲ್ಲ. ಹಿಂದೊಮ್ಮೆ ಮಂಗಳೂರಲ್ಲಿ ಎರಡನೆಯ ಟ್ರಿಬ್ಯೂನಲ್ ಸ್ಥಾಪಿಸುವುದಾಗಿ ಭರವಸೆ ಕೊಟ್ಟಿದುದನ್ನು ಈಗ ಅವರು ಅಲ್ಲಗಳೆಯುತ್ತಾರೆ!

ನಾಲ್ಕು ವರ್ಷಗಳಿಂದ ತೀರ್ಮಾನವಾಗದೆ ಉಳಿದಿರುವ ಪ್ರೆಸ್ ಕೆಲಸಗಾರರ ವಿವಾದ; ಗೇರುಬೀಜ ಕಾರ್ಖಾನೆಗಳು ಸರ್ವಋತು ಕಾರ್ಖಾನೆಗಳೇ? ಅಲ್ಲವೆ ಎಂಬ ವಿಚಾರ; ಮುನಿಸಿಪಲ್ ಕೌನ್ಸಿಲ್ ಒಪ್ಪಿರುವ ಮುನಿಸಿಪಲ್ ಕೆಲಸಗಾರರ ಕೇಳಿಕೆಗಳಿಗೆ ಸರಕಾರದ ಮಂಜೂರಾತಿ ದೊರಕುವ ವಿಷಯ; ಬೀಡಿ ಕೆಲಸಗಾರರ ಬೇಡಿಕೆಗಳ ತೀರ್ಮಾನ—ಹೀಗೆ ಎಷ್ಟೊಂದು ವಿಷಯಗಳು ಸರಕಾರದ ಮುಂದಿವೆ. ಅವನ್ನೆಲ್ಲ ಮಂತ್ರಿ ಬಾಳಿಗಾರವರು ಕಸಕ್ಕಿಂತ ಕಡೆಯೆಂದು. ಅಲಕ್ಷಿಸುತ್ತಿದ್ದಾರೆ.

ಬಾಳಿಗಾರವರ ಕಾರ್ಮಿಕ ಖಾತೆಯ ನಿದ್ರೆಯ ನಟನೆಯನ್ನು ಕೊನೆಗಾಣಿಸಲು ಸಂಘಟಿತ ಕಾರ್ಮಿಕ ವರ್ಗ ಕಾರ್ಯರಂಗಕ್ಕೆ ಇಳಿಯಲು ಸಿದ್ಧವಿದೆ. ಕೈಗಾರಿಕಾ ಶಾಂತಿಯ ಅವಶ್ಯಕತೆಯನ್ನು ಗಮನಿಸಿ ಇನ್ನಾದರೂ ಈ ನಟನೆಯನ್ನು ಕಾರ್ಮಿಕ ಖಾತೆ ಬಿಡುವುದು ಒಳಿತು.

ಪ್ಯಾರಿಸ್‌ನಲ್ಲಿ ಕೂಡಿದ್ದ "ನ್ಯಾಟೋ" ಕೂಟ ಸಾಧಿಸಿದ್ದೇನು?

ಡಿಸೆಂಬರ್ 16ರಿಂದ 19ರ ವರೆಗೆ ಪ್ಯಾರಿಸ್‌ನಲ್ಲಿ ಯುದ್ಧಕೋರರ ಕೂಟ ವೆಂದು ಹೆಸರುಗಳಿಸಿರುವ "ನ್ಯಾಟೋ"—ಉತ್ತರ ಅಟ್ಲಾಂಟಿಕ್ ಕೂಟ—ಸಮಾವೇಶಗೊಂಡಿತ್ತು. ಈ ಕೂಟವು, ಅದರ ನಾಯಕರುಗಳೇ ಹೇಳುವಂತೆ ಒಂದು ವಿಶೇಷ ಸನ್ನಿವೇಶದಲ್ಲಿ ಕೂಡಿದ್ದು, ಬಹು ಪ್ರಾಮುಖ್ಯವುಳ್ಳದ್ದಾಗಿತ್ತು. ವೈಜ್ಞಾನಿಕ ಕ್ಷೇತ್ರದಲ್ಲಿ ಪ್ರಚಂಡ ಸಾಧನೆಯನ್ನು ಗಳಿಸಿ, ಸೋವಿಯತ್‌ರಷ್ಯ ಹಾರಿಸಿದ ಎರಡು "ಸ್ಪೂಟ್ನಿಕ್"ಗಳು ಪಶ್ಚಿಮ ರಾಷ್ಟ್ರಗಳನ್ನು ದಿಗ್ಭ್ರಮೆಗೊಳಿಸಿತ್ತಲ್ಲದೆ, ಭಯಗ್ರಸ್ತಗೊಳಿಸಿತ್ತು. ಅಮೆರಿಕದ ಮೇಲುಗೈಯಿನ, ಅರಗಿನ ಮನೆ ಕರಗಿದ್ದು, ಸಾಮ್ರಾಜ್ಯವಾದಿಗಳ ನಡುವೆಯೇ ಕಳವಳ ಮತ್ತು ಗೊಂದಲಕ್ಕೀಡಾಗಿತ್ತು. ಪಶ್ಚಿಮ ರಾಷ್ಟ್ರಗಳ ನಡುವೆ ಇದರಿಂದಾಗಿ ನೈತಿಕ ಬಲವು ಕುಗ್ಗಿದ್ದು, ಒಡಕು ಸಂಭವಿಸುವ ಪರಿಸ್ಥಿತಿ ಕಾಣಬಂದಿತು.

ಈ ಪರಾಭವದಿಂದ ಚೇತರಿಸಿಕೊಳ್ಳಲು ತನ್ನ ನಡುವಣ ಸಂಬಂಧವನ್ನು ಒಲಪಡಿಸಿಕೊಳ್ಳಲು, ಅಮೆರಿಕನ ಸಾಮ್ರಾಜ್ಯಶಾಹಿಯ [illegible]ತ್ವದಲ್ಲಿ ಪ್ಯಾರಿಸಿನ ಬ್ರಿಟನ್, ಫ್ರಾನ್ಸ್, ಇಟಲಿ, [illegible] ಜರ್ಮನಿ [illegible] [illegible] [illegible]ದ್ದವು. ಸೋವಿಯತ್ ಯೂನಿಯನಿನ ವೈಜ್ಞಾನಿಕ ಸಾಧನೆಯನ್ನು ಮೆಚ್ಚಿ ಮಾನವನ ಪ್ರಗತಿಯಲ್ಲಿ ಇದೊಂದು ಸಾಧನೆಯೆಂದು ಎತ್ತಿ ಹಿಡಿದು, ಚಿರಶಾಂತಿ, ನಿಶ್ಶಸ್ತ್ರೀಕರಣ ಇತ್ಯಾದಿಗಳ ಬಗ್ಗೆ ಇತ್ಯರ್ಥಗೊಳಿಸಲು ಈ ಸಮ್ಮೇಳನ ಸೇರಿರಲಿಲ್ಲ. ಬದಲು ಸೋವಿಯತ್ ರಷ್ಯದ ಈ ವಿಜಯವನ್ನು ಯಾವ ರೀತಿಯಲ್ಲಿ ಎದುರಿಸಬೇಕು ಎಂಬುದೂ ಮತ್ತು ಎಂದಿನಂತೆ ತನ್ನ ಶಕ್ತಿ ಕೇಂದ್ರದ ನೀತಿ ಅನುಸರಿಸಿ ಶಸ್ತ್ರೀಕರಣದ ಓಟವನ್ನು ಹೆಚ್ಚಿಸಿ, ಯುದ್ಧ ಭೀತಿಯನ್ನು ಹೆಚ್ಚಿಸುವುದೇ ಅದರ ಉದ್ದಿಶ್ಯ ಎಂದು ಕಾರ್ಯಕಲಾಪವನ್ನು ಅವಲೋಕಿಸಿದಲ್ಲಿ ಸ್ಪಷ್ಟಗೊಳ್ಳುತ್ತದೆ.

ಶಾಂತಿ ಸಲಹೆಗಳಿಗೆ ತಿರಸ್ಕಾರ

ನ್ಯಾಟೋ ಸಮ್ಮೇಳನ ಕೂಡುವುದಕ್ಕೆ ಮುಂಚಿತವಾಗಿ ಭಾರತದ ಪ್ರಧಾನಿ ನೆಹರೂರವರು ಅಮೆರಿಕ ಮತ್ತು ರಷ್ಯಾ ಸರಕಾರಗಳಿಗೆ ಅಣುಶಸ್ತ್ರಾಸ್ತ್ರಗಳ ಪ್ರಯೋಗವನ್ನು ಕೂಡಲೇ ನಿಲ್ಲಿಸಬೇಕೆಂದೂ, ಶಸ್ತ್ರೀಕರಣದ ಓಟವನ್ನು ನಿಲ್ಲಿಸಬೇಕೆಂದು ಸಂಧಾನದ ಮೂಲಕ ಶಾಂತಿ ಸ್ಥಾಪನೆಗೆ ಯತ್ನಿಸಬೇಕೆಂದೂ ಮನವಿಮಾಡಿಕೊಂಡಿದ್ದರು, ಈ ಮನವಿಗೆ ಸೂಕ್ತ ಉತ್ತರವನ್ನು ರಷ್ಯನ್ ಪ್ರಧಾನಿ ಬುಲ್ಗಾನಿನ್‌ರವರು ರಷ್ಯವು ಅಣುಶಸ್ತ್ರಗಳ ಪ್ರಯೋಗವನ್ನು ಜನವರಿ 1,1958ರಿಂದ ನಿಲ್ಲಿಸಲು ಸಿದ್ಧವಿದೆಯೆಂದೂ, ಬ್ರಿಟನ್ ಮತ್ತು ಅಮೆರಿಕಾ ಸರಕಾರಗಳು ಇದಕ್ಕೆ ಸಮ್ಮತಿಸಬೇಕೆಂದೂ, ರಷ್ಯವು ನಿಶ್ಶಸ್ತ್ರೀಕರಣ, ಮತ್ತು ಇತರ ಅಂತರ ರಾಷ್ಟ್ರೀಯ ಪ್ರಶ್ನೆಗಳನ್ನು ಇತ್ಯರ್ಥಗೊಳಿಸಲು ಮಾತುಕತೆ ನಡೆಸಲು ಸಿದ್ಧವಿದೆಯೆಂದೂ ತಿಳಿಸಿ, ಸೋವಿಯತ್ ಯೂನಿಯನಿನ ವಿದೇಶಾಂಗ ಧೋರಣೆಯು ವಿಶ್ವಶಾಂತಿ ಹಾಗೂ ಅಂತರರಾಷ್ಟ್ರೀಯ ಸೌಹಾರ್ದಕ್ಕಾಗಿಯೇ ಶ್ರಮಿಸುವುದಾಗಿದೆಯೆಂದೂ ತಿಳಿಸಿದ್ದಾರೆ. ಆದರೆ ಅಮೆರಿಕನ್ ಸರಕಾರದ ನಾಯಕರುಗಳು ಮಾತ್ರ ಈ ಬಗ್ಗೆ ಉತ್ತರವನ್ನಿತ್ತಿರುವುದು, ಪ್ರಧಾನಿ ನೆಹರೂರವರು ಇತ್ತಿದ್ದ ಸಲಹೆಗಳನ್ನು ತಿರಸ್ಕರಿಸುದಾಗಿದೆ ಮತ್ತು ತನ್ನ ಹಳೇ ಧೋರಣೆಯನ್ನೇ ಪುನರಾವೃತ್ತಿಗೊಳಿಸುವುದಾಗಿದೆ.

ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ಶಾಂತಿಗೆ ಉತ್ತಮವಾದ ವಾತಾವರಣವನ್ನು ಕಲ್ಪಿಸುವ ಬದಲು ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ಮತ್ತಷ್ಟು ಹದಗೆಡಿಸುವಂತಹ ರೀತಿಯಲ್ಲಿ ನ್ಯಾಟೋ ಸದಸ್ಯ ರಾಷ್ಟ್ರಗಳಿಗೆ ಅಣುಶಸ್ತ್ರಗಳ ಹಾಗೂ ಕ್ಷಿಪಣಿಗಳ ಸರಬರಾಜ ಮಾಡಿ ಶಸ್ತ್ರ

ಅಂತರ ರಾಷ್ಟ್ರೀಯ

ಸಜ್ಜಿತಗೊಳಿಸಲು ತೀರ್ಮಾನಿಸಿವೆ. ಶಕ್ತಿ ಕೇಂದ್ರದ ನೀತಿಯನ್ನು ಅನುಸರಿಸಿ ರಷ್ಯವನ್ನು ಎದುರಿಸಲು ಆಕ್ರಮಣಕಾರಿ ಸಿದ್ಧತೆ ನಡೆಸುತ್ತದೆ.

ಸಾಮ್ರಾಜ್ಯವಾದೀ ದೇಶಗಳಲ್ಲೇ ಬಿಕ್ಕಟ್ಟು

ನ್ಯಾಟೋ ಅಧಿವೇಶನದಲ್ಲಿ ಈ ಬಾರಿ ಅಮೆರಿಕದ ಅಧ್ಯಕ್ಷ ಐಸನ್‌ಹೋವರ್‌ರವರು ಅಸ್ವಸ್ಥರಾಗಿದ್ದರೂ ಸಹ ಭಾಗವಹಿಸಿದ್ದರು. ನ್ಯಾಟೋ ಸದಸ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಕಳವಳವನ್ನು ನೀಗಿಸಿ ತನ್ನ ಹಿಡಿತವನ್ನು ಮತ್ತಷ್ಟು ಭದ್ರಪಡಿಸಿಕೊಳ್ಳುವುದೇ ಅಮೆರಿಕದ ಉದ್ದೇಶವಾಗಿತ್ತು.

ಅಧಿವೇಶನದ ಕಾರ್ಯಕಲಾಪಗಳನ್ನು ನೋಡಿದಲ್ಲಿ ಈ ಉದ್ದೇಶ ಅಷ್ಟು ಸಾಧನೆಯಾಗಿಲ್ಲ ಎಂದು ಹೇಳಬಹುದು. ಆರಂಭದಲ್ಲೇ ಭಿನ್ನಾಭಿಪ್ರಾಯಗಳು ತೋರಿಬಂದಿವೆ. ನಾರ್ವೆ ಮತ್ತು ಡೆನ್ಮಾರ್ಕ್ ದೇಶಗಳು ತಮ್ಮ ದೇಶದಲ್ಲಿ ಕ್ಷಿಪಣಿಗಳ ಮತ್ತು ಅಣುಶಸ್ತ್ರಗಳ ಶೇಖರಣೆಗೆ ನೆಲೆಗೊಡುವುದಿಲ್ಲವೆಂದು ಸಾರಿದುವು. ತಮ್ಮ ದೇಶಗಳಲ್ಲಿ ಜನತೆಯ ಅಭಿಪ್ರಾಯ ಇದಕ್ಕೆ ವಿರೋಧವಿದೆ ಎಂದೂ ತಿಳಿಸಿದ್ದಾರೆ. ಯೂರೋಪಿನ ಇತರ ಕೆಲವು ರಾಷ್ಟ್ರಗಳೂ ಸಹ ಅಮೇರಿಕದ ಧೋರಣೆಗೆ ಸಂಪೂರ್ಣವಾದ ಬೆಂಬಲ ನೀಡಲು ಅಳುಕಿವೆ. ಲಂಡನಿನ 'ಹಿಂದೂ' ಪತ್ರಿಕೆ ಪ್ರತಿನಿಧಿ ನ್ಯಾಟೊ ಸಮ್ಮೇಳನದ ಬಗ್ಗೆ ಬರೆಯುತ್ತಾ "ನ್ಯಾಟೋ ಸಮ್ಮೇಳನ ಮುಕ್ತಾಯವಾಗಿ ಜಂಟಿ ಹೇಳಿಕೆಯೊಂದು ಹೊರಬಿದ್ದಿದ್ದರೂ ಸಹ ತೋರಿಕೆಗೆ ಒಮ್ಮತವು ಕಂಡು ಬಂದರೂ ಸಹ, ಭಿನ್ನಾಭಿಪ್ರಾಯಗಳು ಹೆಚ್ಚಾಗಿ ಕಂಡು ಬರುತ್ತಿವೆ" ಎಂದು ತಿಳಿಸಿದ್ದಾರೆ.

ನ್ಯಾಟೋ ಸಮ್ಮೇಳನವು ತೀರ್ಮಾನಿಸಿರುವಂತೆ ನಿಶ್ಶಸ್ತ್ರೀಕರಣದ ಮಾತುಕತೆಯ ಬಗ್ಗೆ ಏರ್ಪಟ್ಟಿರುವ ಬಿಕ್ಕಟ್ಟನ್ನು ಪರಿಹರಿಸಲು ಸೋವಿಯತ್ ಒಕ್ಕೂಟದೊಂದಿಗೆ ಸಂಧಾನ ನಡೆಸಲು ಮಾಡಿರುವ ಸಲಹೆಯನ್ನು ಸೋವಿಯತ್ ಸರಕಾರ ಈಗಾಗಲೇ ತಿರಸ್ಕರಿಸಿದೆ. ನ್ಯಾಟೋ ಸಮ್ಮೇಳನವು ಯುರೋಪು ದೇಶದಲ್ಲಿ ಅಣುಶಸ್ತ್ರಗಳ ಮತ್ತು ಕ್ಷಿಪಣಿಗಳ ನೆಲೆಗಳನ್ನು ಸ್ಥಾಪಿಸಲು ತೀರ್ಮಾನಿಸಿರುವುದೇ ಸೋವಿಯತ್ ಯೂನಿಯನ್‌ನ ನಿರಾಕರಣೆಗೆ ಕಾರಣವಾಗಿದೆ. ನಿಶ್ಶಸ್ತ್ರೀಕರಣದ ಬಗ್ಗೆ ಒಂದು ಕಡೆ ಮಾತನಾಡುತ್ತಾ, ಶಸ್ತ್ರೀಕರಣದ ಓಟವನ್ನು ಹೆಚ್ಚಿಸುವುದೇ ಪಶ್ಚಿಮ ರಾಷ್ಟ್ರಗಳ ನೀತಿಯಾಗಿದೆ. ಎಂಬುದು ನ್ಯಾಟೋ ಸಮ್ಮೇಳನದ ತೀರ್ಮಾನಗಳಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ.

ಬ್ರಿಟಿಷ್ ಲೇಬರ್ ಪಕ್ಷದವರಿಂದ ಖಂಡನೆ

ನ್ಯಾಟೋ ಸಮ್ಮೇಳನವು ಶಾಂತಿ ಸಾಧನೆಯತ್ತ ಕೊಂಡೊಯ್ಯುವಂತಹ ತೀರ್ಮಾನಗಳನ್ನು ತೆಗೆದುಕೊಂಡಿಲ್ಲವೆಂದೂ ಮತ್ತು ಬ್ರಿಟಿಷ್ ಸರಕಾರವು ಸಮ್ಮೇಳನದಲ್ಲಿ ತಳೆದ ಧೋರಣೆಯು ಸರಿಯಲ್ಲವೆಂದು ಬ್ರಿಟಿಷ್ ಲೇಬರ್ ಪಕ್ಷ ಬ್ರಿಟಿಷ್ ಸರಕಾರವನ್ನು ತೀವ್ರವಾಗಿ ಖಂಡಿಸಿದೆ. ಸೋವಿಯತ್ ಯೂನಿಯನಿನೊಂದಿಗೆ ಮಾತುಕತೆ ನಡೆಸುವುದಕ್ಕೆ ನ್ಯಾಟೋ ಸಮ್ಮೇಳನವು ಸರಿಯಾದ ವಾತಾವರಣವನ್ನು ಕಲ್ಪಿಸಿಲ್ಲವೆಂದು ಕಟುವಾಗಿ ಟೀಕಿಸಿದ್ದಾರೆ. ಬ್ರಿಟಿಷ್ ಸರಕಾರವು ಪ್ಯಾರಿಸ್‌ನಲ್ಲಿ ನಡೆದ ನ್ಯಾಟೋ ಸಮ್ಮೇಳನದಲ್ಲಿ ತಳೆದ ಧೋರಣೆ ಸಮರ್ಪಕವಾಗಿಲ್ಲವೆಂದು ಟೀಕಿಸಿ ಲೇಬರ್ ಪಕ್ಷವು ಮಂಡಿಸಿದ್ದ ನಿರ್ಣಯವು ಕಾಮನ್ಸ್ ಸಭೆಯಲ್ಲಿ ತಿರಸ್ಕೃತವಾಯಿತು. ಇದೇ ಬಗೆಯಲ್ಲಿ ನ್ಯಾಟೋ ಸಮ್ಮೇಳನದ ತೀರ್ಮಾನಗಳಿಗೆ ವಿರೋಧವು ಯುರೋಪಿನ ಇತರ ದೇಶಗಳಲ್ಲೂ ಜನತೆಯಿಂದ ಬರುತ್ತದೆ.

ಈ ಸಂದರ್ಭದಲ್ಲಿ ಸೋವಿಯತ್ ಯೂನಿಯನಿನಲ್ಲಿ ಹಿಂದೆ ಅಮೆರಿಕದ ರಾಯಭಾರಿಯಾಗಿದ್ದ ಜಾರ್ಜ್‌ಕೆನ್ನನ್‌ರವರು ನ್ಯಾಟೋ ಸಮ್ಮೇಳನದ ಬಗ್ಗೆ ಮಾಡಿರುವ ಪ್ರಸ್ತಾವನೆಯು ಗಮನಾರ್ಹವಾಗಿದೆ. ಅವರು ಇತ್ತಿರುವ ಹೇಳಿಕೆಯಲ್ಲಿ "ನ್ಯಾಟೊ ಸಮ್ಮೇಳನದ ತೀರ್ಮಾನವು ರಷ್ಯದೊಂದಿಗೆ ಸಂಧಾನವನ್ನು ಇನ್ನಷ್ಟು ಕಷ್ಟಕರವಾಗಿ ಮಾಡುತ್ತದೆ. ಕಮ್ಯೂನಿಸ್ಟ್ ಉಪಟಳ ಎನ್ನುವುದು ರಾಜಕೀಯವಾದ ಆಪತ್ತಾಗಿದೆಯೇ ಹೊರತು ಮಿಲಿಟರಿ ರೀತ್ಯ ಅಲ್ಲ. ಸೋವಿಯತ್ ಯೂನಿಯನ್ ಯಾವದೇಶದಮೇಲೂ ಆಕ್ರಮಣಕಾರೀಕೃತ್ಯವೆಸಗಿಲ್ಲ. ಸೋವಿಯತ್ ಯೂನಿಯನಿನಲ್ಲಿ ಅಪಾರವಾದ ಸೈನ್ಯವಿರುವುದು ರಕ್ಷಣೆಯದೃಷ್ಟಿಯಿಂದಾಗಿ, ಇದುರಷ್ಯದಲ್ಲಿ ಕ್ರಾಂತಿಯಾದಂದಿನಿಂದಲೂ ಇದೆ ಮತ್ತು ಇದರಿಂದಾಗಿ ಸೋವಿಯತ್ ಸರಕಾರವು "ನ್ಯಾಟೋ"ವನ್ನು ಆಕ್ರಮಣಕಾರೀಅಸ್ತ್ರವನ್ನಾಗಿ ನೋಡುವಂತೆ ಮಾಡಿದೆ.

ಯುರೋಪಿನಿಂದ ಪಶ್ಚಿಮ ರಾಷ್ಟ್ರಗಳ ನೆಲೆಗಳನ್ನು ಹಿಂತೆಗೆದುಕೊಂಡಲ್ಲಿ ಅದು ಪಶ್ಚಿಮ ರಾಷ್ಟ್ರಗಳನ್ನು ಬಲಹೀನಗೊಳಿಸುವುದಿಲ್ಲ ಬದಲು ಸೋವಿಯತ್ ಯೂನಿಯನ್‌ನ ಪರಿಮಿತಿಯನ್ನು ಹಿಂದಕ್ಕೆ ದೂಡುತ್ತದೆ" ಎಂದಿದ್ದಾರೆ.

"ನ್ಯಾಟೊ"ದ ಹಾವಳಿ ಎಂದಿಗಿಂತ ಇಂದು ಹೆಚ್ಚಾಗಿದೆ. ಅಣುಶಸ್ತ್ರಗಳ ಮತ್ತು ಕ್ಷಿಪಣಿಗಳ ನೆಲೆಯನ್ನು ಯುರೋಪಿನಲ್ಲಿ ಏರ್ಪಡಿಸುವುದು ಶಾಂತಿಗೆ ಧಕ್ಕೆ ತರುತ್ತದೆ, ಇದನ್ನು ವಿಶ್ವದ ಎಲ್ಲ ಜನತೆಯೂ ಮುಖ್ಯವಾಗಿ ಯುರೋಪಿನ ಜನತೆ ತೀವ್ರವಾಗಿ ಎದುರಿಸಬೇಕಾಗಿದೆ. ಶಾಂತಿಗಾಗಿ ಹೋರಾಟವನ್ನು ಮತ್ತಷ್ಟು ಬಲಗೊಳಿಸಿ, ಅಮೆರಿಕನ್ ಸಾಮ್ರಾಜ್ಯವಾದಿಗಳ ಯುದ್ಧಕೋರ ನೀತಿಯನ್ನು ಹಿಮ್ಮೆಟ್ಟಿಸಬೇಕಾಗಿದೆ.

ವಿಶ್ವಶಾಂತಿ ಸ್ಥಾಪನೆಗೆ ರಷ್ಯದ ಏಳು ಅಂಶಗಳ ಸಲಹೆ

ಪ್ರಮುಖವಾದ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು, ನಿಶ್ಶಸ್ತ್ರೀಕರಣ, ಅಣುಅಸ್ತ್ರಗಳ ನಿಷೇಧ, ಮೊದಲಾದ ಪ್ರಶ್ನೆಗಳನ್ನು ಕುರಿತು ಮಾತುಕತೆ ನಡೆಸಲು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ಅಗ್ರನಾಯಕರ ಸಮಾವೇಶವೊಂದು ಕೂಡಬೇಕೆಂದು ಸೋವಿಯತ್ ಯೂನಿಯನ್ ಸೂಚಿಸಿದೆ. ಕಳೆದ ವಾರದಲ್ಲಿ ಕೂಡಿದ್ದ ಸುಪ್ರೀಂ ಸೋವಿಯತ್ ಅಧಿವೇಶನವು ಶಾಶ್ವತ ಶಾಂತಿಯನ್ನು ಸ್ಥಾಪಿಸುವುದಕ್ಕೆ ಈ ಕೆಳಕಂಡ ಏಳು ಅಂಶಗಳ ಸಲಹೆಯನ್ನು ಮುಂದಿರಿಸಿದೆ.

1. ರಷ್ಯ, ಅಮೆರಿಕ ಮತ್ತು ಬ್ರಿಟನ್‌ಗಳು ಅಣು ಮತ್ತು ಜಲಜನಕ ಅಸ್ತ್ರಗಳನ್ನು ಪ್ರಯೋಗಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕು;

2. ಪೂರ್ವ ಅಥವಾ ಪಶ್ಚಿಮ ಜರ್ಮನಿಯಲ್ಲಿ ಅಂಥ ಶಸ್ತ್ರಗಳ ನೆಲೆಯನ್ನು ಸ್ಥಾಪಿಸಕೂಡದೆಂದು ಅವರು ಒಪ್ಪಿಕೊಳ್ಳಬೇಕು;

3. ಅಣುಶಸ್ತ್ರವಿಲ್ಲದ ಪ್ರದೇಶವನ್ನು ಅವರುಗಳು ನಿರ್ಮಿಸಬೇಕು;

4. ತಮ್ಮ ಸೈನ್ಯಗಳನ್ನು ಸಾಕಷ್ಟು

(೬ನೇ ಪುಟ ನೋಡಿ)

'ನ್ಯೂ ಏಜ್' ಪ್ರತಿನಿಧಿಯ ಪ್ರಶ್ನೆಗಳಿಗೆ

ಕಾ|| ಎಸ್. ಏ. ಡಾಂಗೆಯುವರ ಉತ್ತರಗಳು

[ಕೇರಳದ ರಾಜಧಾನಿ ಎರ್ನಾಕುಲಂನಲ್ಲಿ ನಡೆಯುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ (ಏ.ಐ.ಟಿ.ಯು.ಸಿ) ಅಧಿವೇಶನವು, ಭಾರತದಲ್ಲಿ ಟ್ರೇಡ್ ಯೂನಿಯನ್ ಚಳುವಳಿಯ ಮತ್ತು ದುಡಿಯುವ ವರ್ಗದ ಹೋರಾಟದ ಮುಂದಿನ ಬೆಳವಣಿಗೆಯ ಬಗ್ಗೆ ಅಸಾಧಾರಣವಾದ ಮಹತ್ವವನ್ನು ಹೊಂದಿರುವಂತಹ ಘಟನೆಯೊಂದಾಗಿದೆ. ಈ ಅಧಿವೇಶನದ ಸಂಬಂಧದಲ್ಲಿ 'ನ್ಯೂ ಏಜ್' ಪ್ರತಿನಿಧಿಯು ಎಸ್. ಏ. ಡಾಂಗೆಯವರನ್ನು ಸಂಧಿಸಿ ನಡೆದ ಪ್ರಶ್ನೋತ್ತರಗಳನ್ನಿಲ್ಲಿ ಕೊಡಲಾಗಿದೆ].

★

ಪ್ರಶ್ನೆ: ವಿಶ್ವದ ಒಂದು ಭಾಗದಲ್ಲಿ ಸಮಾಜವಾದವು 40 ವರ್ಷಗಳನ್ನು ಪೂರ್ಣಗೊಳಿಸಿದಾಗ ಈ ರಜತ ಮಹೋತ್ಸವದ ಅಧಿವೇಶನವು ನಡೆಯುತ್ತಿದೆ. ಈ ಬೆಳವಣಿಗೆಯ ಮಹತ್ವವನ್ನು ತಾವು ಯಾವ ರೀತಿಯಲ್ಲಿ ನೋಡುವಿರಿ?

ಉತ್ತರ: ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ, ಸಮಾಜವಾದಿ ವಿಜ್ಞಾನ ಮತ್ತು ಸಮಾಜವಾದಿ ಅರ್ಥಿಕವು ಇನ್ನೊಮ್ಮೆ ತನ್ನ ಶ್ರೇಷ್ಠತೆಯನ್ನು ಪ್ರದರ್ಶಿಸಿದ ಈ ಸಂದರ್ಭದಲ್ಲಿ ಏ.ಐ.ಟಿ.ಯು.ಸಿ.ಯು ಸೇರಿದೆ. ನಮ್ಮ ದೇಶದಲ್ಲಿ, ಯೋಜನೆಗೆ ಬೆಂಬಲವಾಗಿ ಸಮಾಜವಾದಿ ವಿಶ್ವವು 'ನಿಸ್ತಂತು ಸಹಾಯ' (Aid without strings) ವನ್ನಿತ್ತಿದೆ. ಅಲ್ಲದೆ ಸಮಾಜವಾದದ ಈ ಎಲ್ಲಾ ಶಕ್ತಿಯು ಅಂತರರಾಷ್ಟ್ರೀಯ ಸಂಪರ್ಕಗಳಲ್ಲಿ ಶಾಂತಿಗಾಗಿದೆ ಎಂಬುದು ಪ್ರತಿಯೊಬ್ಬನಿಗೂ ತೋರುವ ಅಂಶವಾಗಿದೆ.

ಭಾರತದ ಟ್ರೇಡ್ ಯೂನಿಯನ್ ಚಳುವಳಿಯು—ಮತ್ತು ಜನಿಸಿದಂದಿನಿಂದಲೇ ಏ.ಐ.ಟಿ.ಯು.ಸಿ.ಯು — ಅಂತರರಾಷ್ಟ್ರೀಯ ಐಕ್ಯತೆಯ ತತ್ವಗಳ ಮೇಲೆಯೇ ತನ್ನ ನಿಲುವನ್ನು ಹೊಂದಿಸಿದೆ; ಮತ್ತು ಆದರ (ಏ.ಐ.ಟಿ.ಯು.ಸಿ.ಯ) ಬೆಳವಣಿಗೆಯ ಆರಂಭದ ಘಟ್ಟದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳ ದುಡಿಯುವ ಜನದ ಬೆಂಬಲ ಅದಕ್ಕೆ ದೊರಕಿದೆ, ಅದರಲ್ಲೂ ಅಂದು ಒಂದೇ ಒಂದು ಸಮಾಜವಾದಿ ರಾಷ್ಟ್ರವಾದ ಸೋವಿಯತ್ ಯೂನಿಯನ್ನಿನ ಟ್ರೇಡ್ ಯೂನಿಯನ್‌ಗಳ ಬೆಂಬಲವು ಅದಕ್ಕೆ ವಿಶೇಷವಾಗಿ ದೊರಕಿದೆ.

1920ರಲ್ಲಿ ಏ.ಐ.ಟಿ.ಯು.ಸಿ.ಯ ಸ್ಥಾಪನೆಯಾದಾಗ ಸಮಾಜವಾದದ ವಿಜಯದ ಬಗ್ಗೆ ಅಂದು ಸಂಶಯವಿರುವಂತಹುದಾಗಿತ್ತು.

ಇಂದು ಏ. ಐ. ಟಿ. ಯು. ಸಿ. ಯ ರಜತ ಮಹೋತ್ಸವದ ಅಧಿವೇಶನವು ಕೂಡುವಾಗ ಸಮಾಜವಾದಿ ವಿಜಯವು ನಿಸ್ಸಂಶಯವಾಗಿಯೂ ಸಾಧಿಸಲ್ಪಟ್ಟಿದೆ; ಇದು, ಅಧಿವೇಶನದವನ್ನು ನಿಜವಾಗ್ಲೂ ವಿಜಯ ಮಹೋತ್ಸವವನ್ನಾಗಿಸಿದೆ.

ಪ್ರ: ನಾಲ್ಕನೆಯ ಜಾಗತಿಕ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧಿವೇಶನದ ಮುಂದಿಟ್ಟ ನಿಮ್ಮ ವರದಿಯಲ್ಲಿ ನೀವು ವಸಾಹತುಷಾಹಿ ದೇಶಗಳ ಕಾರ್ಮಿಕರ ಮತ್ತು ಇತ್ತೀಚಿಗೆ ಸ್ವಾತಂತ್ರ್ಯ ಗಳಿಸಿದ ದೇಶಗಳ ಕೆಲಸಗಾರರ ಕರ್ತವ್ಯಗಳೇನೆಂದು ವಿವರಿಸಿದ್ದೀರಿ. ಭಾರತೀಯ ಕಾರ್ಮಿಕರು ಈ ಕರ್ತವ್ಯಗಳನ್ನು ಪೂರೈಸಲು ಏ.ಐ.ಟಿ.ಯು.ಸಿ.ಯ ಎರ್ನಾಕುಲಂ ಅಧಿವೇಶನವು ಯಾವ ಕಾರ್ಯಕ್ರಮವನ್ನು ಮುಂದೊಡ್ಡುವುದು?

ಉ: ವಸಾಹತುಶಾಹಿಗಳು ರಾಜಕೀಯವಾಗಿ ಅಲ್ಲದಿದ್ದರೂ ಆರ್ಥಿಕವಾಗಿ ತಮ್ಮ ಹಿಡಿತವನ್ನು ಇನ್ನು ಬಲಗೊಳಿಸಬಹುದೆಂಬ ಆಶೋತ್ತರಗಳನ್ನಿಟ್ಟುಕೊಂಡಿದ್ದಾರೆ ಎಂಬುದರ ಬಗ್ಗೆ, ಈ ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ ದೇಶಗಳಲ್ಲಿನ ಟ್ರೇಡ್ ಯೂನಿಯನ್ ಚಳುವಳಿಯ ಎಲ್ಲಾ ವಿಭಾಗಗಳಲ್ಲೂ ಏಕಾಭಿಪ್ರಾಯವಿದೆ. ಆದಕಾರಣ ಈ ದೇಶಗಳು ಆರ್ಥಿಕ ಅವಲಂಬನದಿಂದ ವಿಮುಕ್ತರಾಗುವ ಹಾದಿಯಲ್ಲಿ ಒಡ್ಡಲಾಗುವ ಯಾವೊಂದು ಕಂಟಕಗಳನ್ನು ನೀಗುವಲ್ಲಿ ಪರಸ್ಪರ ಸಹಾಯ ಮಾಡಬೇಕೆಂಬುದರ ಬಗ್ಗೆ ವಿವಿಧ ತತ್ವಾಭಿಪ್ರಾಯಗಳಲ್ಲಿ ಒಡಂಬಡಿಕೆ ಇದೆ ಎಂದಂತಾಯಿತು.

ಇದಕ್ಕೆ ಇತ್ತೀಚಿಗಿನ ನಿದರ್ಶನ ಇಂಡೊನೇಷಿಯಾ. ಇಂಡೋನೇಷಿಯದ ಬೆಂಬಲವಾಗಿ ಸಾಧ್ಯವಾದ ಐಕ್ಯತಾ ಕ್ರಮಗಳನ್ನು ಆಚರಿಸಲು ಏ.ಐ.ಟಿ.ಯು.ಸಿ.ಯು ಕರೆಕೊಡುವುದು. ಡಚ್ ಸಾಮ್ರಾಜ್ಯಶಾಹಿಯಿಂದ ವೆಸ್ಟ್ ಇರಿಯನಿನ ಬಿಡುಗಡೆಗಾಗಿ ಇಂಡೊನೇಷಿಯಾ ಜನತೆಯ ನ್ಯಾಯವಾದ ಕೇಳಿಕೆಗೆ ಭಾರತ ಸರ್ಕಾರದ ವಿದೇಶ ನೀತಿ ಕೂಡಾ ಸಮರ್ಥನೆ ಇತ್ತಿದೆ ಎಂದ ಮೇಲೆ, ಟ್ರೇಡ್ ಯೂನಿಯನ್ ಚಳುವಳಿಯ ಎಲ್ಲಾ ವಿಭಾಗಗಳಿಗೂ ಸಾಮಾನ್ಯ ಕಾರ್ಯಕ್ರಮವೊಂದನ್ನು ಅಳವಡಿಸಿಕೊಳ್ಳಲು ಕಷ್ಟವಾಗದು.

ಅದೇ ರೀತಿಯಲ್ಲಿ ಅಲ್ಜೀರಿಯಾಕ್ಕೆ ಬೆಂಬಲವಾಗಿ ಸೌಹಾರ್ದತಾ ಚಳುವಳಿಯನ್ನು ಹೂಡಬಹುದು. ಆರಂಭದಲ್ಲಿ ಸಭೆಗಳು ಪ್ರದರ್ಶನಗಳು ಮತ್ತು ಐಕ್ಯತಾ ಸಹಾಯಗಳ ರೂಪದಲ್ಲಿ ಇದನ್ನು ಕೈಗೊಳ್ಳಬಹುದು.

ಪ್ರ: ನಿಮ್ಮ ಅಭಿಪ್ರಾಯದಲ್ಲಿ 1954ರ ಏ.ಐ.ಟಿ.ಯು.ಸಿ.ಯ ಅಧಿವೇಶನದ ನಂತರ, ಭಾರತದ ಟ್ರೇಡ್ ಯೂನಿಯನ್ ಚಳುವಳಿಯ ಪ್ರಗತಿಯ ಪ್ರಧಾನ ರೂಪಗಳೇನು?

ಉ: 195೪ರಿಂದ, ಕಾರ್ಮಿಕರು ತಮ್ಮ ಮೂಲ ವೇತನದಲ್ಲಿ ಬಡ್ತಿ ರೂಪದಲ್ಲಾಗಲೀ ಅಥವಾ ಬೋನಸ್ ರೂಪದಲ್ಲಾಗಲೀ ಅಧಿಕ ವೇತನ ಸಿಗುವಂತಾಗಬೇಕೆಂದು ಹೆಚ್ಚೆಚ್ಚು ಸಂಯುಕ್ತ ಹೋರಾಟಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಈ ಹೋರಾಟಗಳು ಮೇಲಿನ ಬೇರೆ ಬೇರೆ ಕೇಂದ್ರ ಯೂನಿಯನ್‌ಗಳ ನಾಯಕತ್ವವು ಒಂದಾಗದಿದ್ದರೂ, ಕೆಳಗಿನಿಂದ ಸಂಯುಕ್ತವಾಗಿ ನಡೆಸಲ್ಪಟ್ಟತಾದ ಕಾರಣ ಕಾರ್ಮಿಕರ ಆದಾಯದಲ್ಲಿ ಸ್ವಲ್ಪವಾದರೂ ಹೆಚ್ಚುವರಿ ತಂದಿದೆ. ಹಣದ ಉಬ್ಬರವನ್ನು ನಿರೋಧಿಸುವ ನೆವವನ್ನೊಡ್ಡಿ ಕೂಲಿ ಕಡಿಮೆ ಮಾಡಬೇಕೆಂಬ ಪ್ರಯತ್ನ ಸೋಲಿಸಲ್ಪಟ್ಟಿದೆ.

ಎರಡನೆಯದಾಗಿ, ಸರ್ವಸಾಧಾರಣವಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಟ್ರೇಡ್ ಯೂನಿಯನ್ ಚಳುವಳಿಯು ಶಕ್ತಿಯುತವಾಗಿದೆ; ಮತ್ತು ಕಾರ್ಮಿಕರ ಕೆಲಸ ಹಾಗೂ ಜೀವನ ಮಟ್ಟದ ಮೇಲೆ ನಡೆಸಲಾಗುವ ಧಾಳಿಯನ್ನು ಹಿಮ್ಮೆಟ್ಟಿಸುವಷ್ಟು ಬಲಯುತವಾಗಿದೆ. ನಾವು ಸಾರ್ವತ್ರಿಕವಾದ ವೇತನ ಬಡ್ತಿ ಸಿಗಬೇಕೆಂದು ಕೇಳಿಕೆಗಳನ್ನು ಎತ್ತಿದ್ದೆ ತಡ, ಇಡೀ ಚಳುವಳಿಯ ಕೇಳಿಕೆ ಇದಾಗಿ ಪರಿಣಮಿಸಿತು. ಇದರಿಂದಾಗಿ, ದೇಶವಿಡೀ ವೇತನ ಬಡ್ತಿ ಸಿಗದಿದ್ದರೂ ಕೂಡಾ, ಕೆಲಸಗಾರರಲ್ಲಿ ಬಹುಮತವಾಗಿ, ಕೆಲವೊಮ್ಮೆ ಅಲ್ಪ, ಇನ್ನು ಕೆಲವು ಸಂದರ್ಭಗಳಲ್ಲಿ ಸಾಕಷ್ಟು ಲಾಭವನ್ನು ಹೊಂದಿರುತ್ತಾರೆ. ಮೊನ್ನೆ ಮೊನ್ನೆ ಸರ್ಕಾರಿ ನೌಕರರಿಗೆ ಕೊಡಲಾದ ತಾತ್ಕಾಲಿಕ ಪರಿಹಾರ ಇದಕ್ಕೊಂದು ನಿದರ್ಶನ.

ನಮ್ಮ ಅಧಿವೇಶನವು ವೇತನ ಸ್ಥಿತಿಯನ್ನು ವಿಮರ್ಶಿಸಿ, ಸರ್ಕಾರಕ್ಕೂ ವಿವಿಧ ಕೈಗಾರಿಕೆಗಳ ಮಾಲಿಕರಿಗೂ, ಇಡೀ ದೇಶಕ್ಕೂ ಸಮಗ್ರವಾದ ಒಂದು ವೇತನ ರಚನೆಯಾಗಬೇಕೆಂಬ ಸೂಚನೆಗಳನ್ನೀಯುವುದು.

ಪ್ರ: ಸರಕಾರದ ಕಾರ್ಮಿಕ ನೀತಿಯಲ್ಲಿನ ಬೆಳವಣಿಗೆಗಳು ಮತ್ತು ಕಳೆದ ಭಾರತ ಕಾರ್ಮಿಕ ಸಮ್ಮೇಳನವನ್ನು ಅವಗಾಹನೆಗೆ ತೆಗೆದುಕೊಂಡು, ಎರ್ನಾಕುಲಂ ಅಧಿವೇಶನವು ಟ್ರೇಡ್ ಯೂನಿಯನ್‌ಗಳ ನಿಲುವಿನ ಪುನರ್ ನಿರ್ದೇಶನವನ್ನು ಪರಿಗಣಿಸುವುದೇ?

ಉ: ಭಾರತ ಕಾರ್ಮಿಕ ಸಮ್ಮೇಳನದ ಸಲಹೆ ಮತ್ತು ತೀರ್ಮಾನಗಳು ಚರ್ಚೆಗೆ ಬಂದೇ ಬರುವುದು; ಸಮ್ಮೇಳನದ ಪ್ರಧಾನ ತೀರ್ಮಾನಗಳನ್ನು ಒಪ್ಪಲಾಗುವುದೆಂದು ನನ್ನ ಭಾವನೆ. ಆದರೆ ಕೈಗಾರಿಕೆಗಳಲ್ಲಿ ಇದೀಗ ರೂಪಿಸಿರುವ ಶಿಸ್ತಿನ ನಿಬಂಧನೆಗಳಿಗೆ ಮಾತ್ರ ನಮ್ಮ ಒಪ್ಪಿಗೆ ಸಿಗುವುದೆಂದು ನಾನು ಭಾವಿಸಲಾರೆ.

ಪ್ರ: ನಿಮ್ಮ ಅಧಿವೇಶನದ ಸ್ವಲ್ಪ ಕಾಲಾನಂತರವೇ 'ಇಂಟಕ್'ನ ವಾರ್ಷಿಕಾಧಿವೇಶನ ಜರುಗಲಿರುವುದರಿಂದ ಏ.ಐ.ಟಿ.ಯು.ಸಿ.ಯು ಐಕ್ಯತೆಯ ಪ್ರಶ್ನೆಯ ಮೇಲೆ ಇಂಟಕ್‌ನೊಂದಿಗೆ ನೇರವಾದ ಯತ್ನ ಮಾಡುವುದೇ?

ಉ: ನಾವು, ಇಂಟಕ್, ಹೆಚ್.ಎಂ.ಎಸ್. ಮತ್ತು ಯು.ಟಿ.ಯು.ಸಿ. ತಮ್ಮ ಸೌಹಾರ್ದ ಪ್ರತಿನಿಧಿಗಳನ್ನು ಮತ್ತು ವೀಕ್ಷಕರನ್ನು ಕಳುಹಿಸಿ, ನಮ್ಮ ಅಧಿವೇಶನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲೆಂದು ಆಮಂತ್ರಣವಿತ್ತಿದ್ದೇವೆ. ನಮ್ಮ ಮೇಲಿನ ಅವರ ಟೀಕೆಗಳನ್ನು ಕೇಳಲು ಕೂಡ ನಾವು ಸಿದ್ಧರಿದ್ದೇವೆ; ಇದರಿಂದಾದರೂ ನಮ್ಮಲ್ಲಿ ಪರಸ್ಪರ ತಿಳುವಳಿಕೆಯ ಆಧಾರದ ಮೇಲೆ ಸಂಯುಕ್ತ ಕ್ರಮ ಜರುಗಿಸಲು ಹಾದಿ ಸಾಧಿಸಿದಂತಾಗಲಿ.

ಪ್ರ: ಕಳೆದ ಏ.ಐ.ಟಿ.ಯು.ಸಿ.ಯ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಏ.ಐ.ಟಿ.ಯು.ಸಿ. ಸಂಘಟನೆಯನ್ನು ಬಲಪಡಿಸಬೇಕೆಂಬುದರ ಅಗತ್ಯತೆಯನ್ನು ಸ್ಪಷ್ಟೀಕರಿಸಲಾಗಿದೆ. ಎರ್ನಾಕುಲಂನಲ್ಲಿ ಕೂಡಾ ಈ ಪ್ರಶ್ನೆಯನ್ನು ಎತ್ತಲಾಗುವುದೇ?

ಉ: ಏ.ಐ.ಟಿ.ಯು.ಸಿ., ಕಾರ್ಮಿಕ ವರ್ಗದಲ್ಲಿ ಇಂದು ನೈತಿಕ ಹಾಗು ರಾಜಕೀಯ ಪ್ರಭಾವವನ್ನು ಹೊಂದಿರುವ ಅತ್ಯಂತ ಬಲಯುತ ಶಕ್ತಿಯಾಗಿದ್ದರೂ ಸರ್ಕಾರಿ ಮತ್ತು ಇತರ ಮಾಲಿಕರು, ಕೆಲವು ಯೂನಿಯನ್‌ಗಳ ಹೊರತಾಗಿ, ಏ.ಐ.ಟಿ.ಯು.ಸಿ.ಯ ಯೂನಿಯನ್‌ಗಳನ್ನು ಅಂಗೀಕರಿಸಲು ಪಟ್ಟುಹಿಡಿದು ನಿರಾಕರಿಸುತ್ತಿದ್ದಾರೆ. ಆದ್ದರಿಂದ ನಮ್ಮನ್ನು ಅನುಸರಿಸುವವರ ಸಂಖ್ಯೆಗನುಸಾರವಾಗಿ ನಮ್ಮ ಸಂಘಟನೆಯ ಸದಸ್ಯತ್ವವನ್ನು ತೋರಿಸಲು ನಮಗಸಾಧ್ಯವಾಗಿದೆ. ಆದುದರಿಂದ ಈ ಪರಿಸ್ಥಿತಿಯನ್ನು ಹೋಗಲಾಡಿಸುವ ಬಗ್ಗೆ ಈ ಅಧಿವೇಶನವು ತೀವ್ರವಾಗಿ ಪರ್ಯಾಲೋಚಿಸಬೇಕಾಗುವುದು.

ಒಂದು ನಿರ್ದಿಷ್ಟವಾದ ಕೈಗಾರಿಕೆಯೋ, ಸಂಸ್ಥೆಯೋ, ಇದರಲ್ಲಿ ಯಾವ ಯೂನಿಯನ್ನಿಗೆ ಕಾರ್ಮಿಕರ ಅಧಿಕ ಬೆಂಬಲವಿದೆ ಎಂಬುದನ್ನು ಕಾರ್ಮಿಕರ ಮತಗಣನೆಯ ಮೂಲಕ ನಡೆಯಲೆಂದು ನಾವು ಅಂದಿನಿಂದ ಒತ್ತಾಯಿಸುತ್ತ ಬಂದಿದ್ದೇವೆ. ಆದರೆ 'ಇಂಟಕ್' ಮತ್ತು ಸರಕಾರ ಇದಕ್ಕೆ ಬದ್ಧ ವಿರೋಧವಿದೆ. ಯೂನಿಯನ್ನಿನ ನಿಜವಾದ ಅಂಗೀಕಾರಾರ್ಹತೆಯನ್ನು ಅಳೆಯಲು ಇದೊಂದೇ ಪ್ರಜಾಸತ್ತಾತ್ಮಕವಾದ ಕ್ರಮ, ಇದನ್ನವರು ಒಪ್ಪಿಕೊಳ್ಳುವಂತೆ ನಾವು ಇನ್ನೊಮ್ಮೆ ಪ್ರಯತ್ನಿಸುತ್ತೇವೆ.

ಪ್ರ: ಅಧಿವೇಶನಾರಂಭದಲ್ಲಿ, ಏ. ಐ. ಟಿ. ಯು. ಸಿ.ಯ ಪ್ರಧಾನ ಕಾರ್ಯದರ್ಶಿಯಾಗಿ ಭಾರತೀಯ ಕಾರ್ಮಿಕರಿಗೆ ನೀವೊಂದು ಸಂದೇಶ ಕೊಡುವಿರಾ?

ಉ: ಅಧಿವೇಶನದಾರಂಭದ ಈ ಹೊತ್ತಿನಲ್ಲಿ ನಾನು ಹೇಳುವುದಿಷ್ಟೆ:

ತನ್ನ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಪಂಚವಾರ್ಷಿಕ ಯೋಜನೆಯ ಯಶಸ್ಸಿನ ಮೇಲೆ, ಭಾರತದ ಅರ್ಥಿಕವು ತನ್ನ ಸರ್ವಸ್ವವನ್ನೂ ಪಣ ಕಟ್ಟಿದೆ. ಆದರೆ ಗುತ್ತೇದಾರಿ ಬಂಡವಾಳವು ಸರ್ಕಾರದ ನೀತಿಗಳ ಮೇಲೆ ತನ್ನ ಸಮಸ್ತ ಒತ್ತಾಯ ಹೇರಿದುದರಿಂದಾಗಿ, ಯೋಜನೆಯ ಅತ್ಯಂತ ಅವಶ್ಯಕ ಅಂಶಗಳು ಕೂಡಾ ಅಪಾಯಕ್ಕೆ ಸಿಲುಕುವಂತಾಗಿದೆ. ಯೋಜನೆಗೊದಗುವ ಗಂಡಾಂತರ, ಒಂದು ರೀತಿಯಲ್ಲಿ ಕಾರ್ಮಿಕ ವರ್ಗದ ಭವಿಷ್ಯಕ್ಕೊದಗುವ ಗಂಡಾಂತರವೇ ಸರಿ.

(ಕೊನೇ ಪುಟ ನೋಡಿ)

—ಭಾರತೀಯ ಜನತಾ ಕಲಾರಂಗದ ಮುನ್ನಡೆ

ಭಾರತೀಯ ಜನತಾ ಕಲಾರಂಗ (I. P. T. A.)ದ ಎಂಟನೆಯ ಅಧಿವೇಶನ ದೆಹಲಿಯಲ್ಲಿ ಈ ವಾರದ ಆರಂಭದಲ್ಲಿ ಶುರುವಾಗಿದೆ. ಹದಿನೈದು ವರ್ಷಗಳಿಂದ ಈ ಸಂಸ್ಥೆ ಕಲಾಕ್ಷೇತ್ರದಲ್ಲಿ ಜನತೆಯ ಸೇವೆಯನ್ನು ಅವಿಚ್ಛಿನ್ನವಾಗಿ ಸಲ್ಲಿಸುತ್ತ ಬಂದಿದೆ.

ಬೆಂಗಳೂರಿನಲ್ಲಿ ಹಲವು ಉತ್ಸಾಹಿ ಕಲಾವಿದರಿಂದ ಆರಂಭವಾದ ಜನತಾ ಕಲಾರಂಗದ ಚಟುವಟಿಕೆಯು ಇತರ ಪ್ರಾಂತಗಳಿಗೆ ಹರಡಿ ಬೃಹತ್ ಚಳುವಳಿಯಾಗಿ ಬೆಳೆದು ಅಖಿಲಭಾರತ ಸಂಸ್ಥೆಯ ರೂಪುಗೊಂಡಿತು.

ಮುಂಬಯಿಯ ತಂಡವು 1942ರ ಮೇ ದಿನದಂದು ನಾಟಕವೊಂದನ್ನು ಪ್ರದರ್ಶಿಸಿ ಜನರ ಮೆಚ್ಚುಗೆಯನ್ನು ಪಡೆಯಿತು. ಶರ್ಮಾಲ್ಕರ್ ಇವರ "ದಾದ" ಮತ್ತು ಜಾಫ್ರಿಯವರ "ಏ ಕಿಸ್ಸಾ ಖುನ್ ಹೈ" ಎಂಬ ಫಾಸಿಸ್ಟ್ ವಿರೋಧೀ ನಾಟಕಗಳು ಆ ಕಾಲದಲ್ಲಿ ರಂಗಭೂಮಿಯಲ್ಲಿ ಕ್ರಾಂತಿಯನ್ನುಂಟು ಮಾಡಿತು.

ಅದೇ ರೀತಿಯಲ್ಲಿ ಹಲವಾರು ಪ್ರಾಂತಗಳಲ್ಲಿ ಬಂಗಾಳ, ಅಸ್ಸಾಂ, ಕೇರಳ, ಆಂಧ್ರಗಳಲ್ಲಿ ಜನತಾ ಕಲಾರಂಗವು ಸಂಘಟಿತವಾಗಿ ತೀವ್ರ ಚಟುವಟಿಕೆ ನಡೆಸಿಕೊಂಡು, ಜನತೆಯ ಸೇವೆಯಲ್ಲಿ ತೊಡಗಿತು. ಕಲೆ ನಿಜವಾಗಿ ಜನತೆಯ ಸೇವೆಗಾಗಿ ಎಂದು ಜನರಲ್ಲಿ ಮನದಟ್ಟು ಮಾಡಿತು. ಹಲವಾರು ಜನರು ಕ್ರಿಯಾತ್ಮಕ ಚಟುವಟಿಕೆಯಲ್ಲಿ ತೊಡಗಿದ್ದರು. ಸಾಮಾನ್ಯ ಕಾರ್ಮಿಕರು ಮತ್ತು ರೈತರು ಸುಪ್ತವಾಗಿದ್ದ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸಲು ಉದ್ಧರಿಸಿಕೊಳ್ಳಲು ಜನತಾ ಕಲಾರಂಗ ಸಾಧನವಾಯಿತು.

ಬಂಗಾಳ ಬರಗಾಲ ಕಾಲದಲ್ಲಿ

ಬಂಗಾಳದ ಬರಗಾಲ ಕಾಲದಲ್ಲಿ ಜನತಾ ಕಲಾರಂಗವು ದೇಶಾದ್ಯಂತ ನಡೆಸಿದ ಚಳವಳಿಯು ಇತಿಹಾಸ ಪ್ರಸಿದ್ಧವಾಗಿದೆ. ಬಂಗಾಳದ ಮಾರಿಗೆ ತುತ್ತಾಗಿ ಇಡೀ ಜನಾಂಗವೇ ನಾಶವಾಗುವ ಪರಿಸ್ಥಿತಿ ಒದಗಿತ್ತು. ಆಡಳಿತದಲ್ಲಿದ್ದ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಕ್ಷಾಮ ಪರಿಹಾರ ಕಾರ್ಯದಲ್ಲಿ ತೆಗೆದುಕೊಂಡ ಕ್ರಮಗಳು ಯಾವ ಮೂಲೆಗೂ ಸಾಲದಾಗಿತ್ತು. ಬಂಗಾಳದ ಜನತೆಯನ್ನು ರಕ್ಷಿಸಲು ಇಡೀ ದೇಶವಲ್ಲೇ ಆಂದೋಳನ ಉಂಟುಮಾಡಿ ನಿಧಿ ಸಂಗ್ರಹಿಸುವ ಕಾರ್ಯ ಜನರ ಮೇಲೆ ಬಿತ್ತು. ಈ ಕಾರ್ಯದಲ್ಲಿ ಜನತಾ ಕಲಾರಂಗ ತನ್ನ ಭಾಗವನ್ನು ಯಶಸ್ವಿಯಾಗಿ ನಿರ್ವಹಿಸಿತು.

ನೂರಾರು ಕಲಾ ತಂಡಗಳು ಜನತಾ ಕಲಾರಂಗದ ಅಡಿಯಲ್ಲಿ ಕಾರ್ಯಾರಂಭ ಮಾಡಿತು. ನಾಟಕಗಳು, ಜಾನಪದ ಗೀತೆಗಳು, ನೃತ್ಯಗಳು, ಮುಂತಾದ ಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲಕ ಬಂಗಾಳದ ಸೋದರರಿಗೆ ನಿಧಿ ಕೂಡಿಸಲು ತೊಡಗಿತು. ಪ್ರಾಂತೀಯ ಅಥವಾ ಭಾಷೆಯ ಎಲ್ಲೆಯನ್ನು ಮೀರಿ ಎಲ್ಲ ಪ್ರಾಂತಗಳ ಕಲಾವಿದರೂ ಈ ಕಾರ್ಯದಲ್ಲಿ ತೊಡಗಿದರು. ಈ ಪರಿಹಾರ ಕಾರ್ಯದಲ್ಲಿ ನಾಯಕರಾಗಿದ್ದ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರು ರಚಿಸಿ ಹಾಡಿದ "ಭೂಖಾ ಹೈ ಬೆಂಗಾಲ್" (ಬಂಗಾಳ ಹಸಿದಿದೆ) ಎಂಬ ಗೀತೆ ದೇಶಾದ್ಯಂತ ಎಲ್ಲರ ಮನವನ್ನು ಕರಗಿಸಿತು. ಅವರ ನಾಯಕತ್ವದಲ್ಲಿ ಒಂದು ತಂಡವು ಮೇಲಿನ ಗೀತೆಯನ್ನು ಹಾಡುತ್ತ ಭಾರತದ ನಾನಾ ಪ್ರಾಂತಗಳನ್ನು ಸುತ್ತಿ ನಿಧಿ ಸಂಗ್ರಹಿಸಿತು. ಬಿಜೋನ್ ಭಟ್ಟಾಚಾರ್ಜಿಯವರ 'ನಬಾನ್ನ' ನಾಟಕ ಆ ಸಮಯದಲ್ಲಿ ಅತ್ಯಂತ ಜನಪ್ರಿಯವಾಗಿತ್ತು.

ದೇಶಾದ್ಯಂತ, ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಆಂಧ್ರ, ಬಂಗಾಲ ಮತ್ತು ಅಸ್ಸಾಂಗಳಲ್ಲಿ ಅನೇಕ ಸಂಘಟನೆಗಳು ಸ್ಥಾಪನೆಯಾಗಿ, ಅವುಗಳ ಸಂಖ್ಯೆ ಸುಮಾರು 500ಕ್ಕೂ ಮಿಕ್ಕಿ ಇತ್ತು.

★

ನವೋದಯ

ಜನತಾ ಕಲಾರಂಗ ಚಳವಳಿಯು ನಮ್ಮ ದೇಶದ ಸಾಂಸ್ಕೃತಿಕ ಕೆಲಸಗಾರರಿಗೆ ನವಚೇತನವನ್ನುಂಟು ಮಾಡಿತು. ನಿಜವಾದ ಕಲೆ ಮತ್ತು ಸಂಸ್ಕೃತಿಯನ್ನು ಸೃಷ್ಟಿಸುವವರು ಸಾಮಾನ್ಯ ಜನತೆಯೇ ಹೊರತು ಕೊಠಡಿಯಲ್ಲಿ ಕುಳಿತು ಕಲಾರೂಪಕಗಳ ಮೇಲೆ ಪ್ರಯೋಗ ನಡೆಸುವವರಲ್ಲ ಎಂಬುದು ಎಲ್ಲರಲ್ಲೂ ಅರಿವಾಯಿತು.

ಅನೇಕ ಯುವಕರು, ಭಾವೀ ಕಲಾವಿದರು ಜನತಾ ಕಲಾರಂಗದಲ್ಲಿ ಸೇರಿದರು. ರವಿಶಂಕರ್, ಉಸ್ತಾದ್ ಅಲ್ಲಾವುದ್ದಿನ್ ಖಾನ್‌ರ ಬಂಧು ಬಹಾದೂರ್ ಹುಸ್ಸೇನ್, "ಪಪ್ಪೆಟ್ ಬ್ಯಾಲೆ" (ಗೊಂಬೆಗಳ ನೃತ್ಯ) ಯ ನಿರ್ಮಾತೃ ಶಾಂತಿ ಬರ್ದನ್, ಉದಯಶಂಕರ್‌ರವರ ಆಲ್ಮೋರ ಕೇಂದ್ರದ ಸದಸ್ಯರು, ಅನೇಕ ಮಂದಿ ಕಲಾವಿದರು, ಸಂಗೀತಗಾರರು ಲೇಖಕರು ಜನತಾ ಕಲಾರಂಗ ಭೂಮಿಗೆ ಸೇರಿಕೊಂಡರು.

ಕೇಂದ್ರ ಸಂಸ್ಥೆಯು ಈ ಕಾಲದಲ್ಲಿ ನಮ್ಮ ಕಲೆ ಮತ್ತು ಸಾಂಸ್ಕೃತಿಯ ಕ್ಷೇತ್ರದಲ್ಲಿ ಬೃಹತ್ ಪಾತ್ರ ವಹಿಸಲು. "ದಿ ಸ್ಪಿರಿಟ್ ಆಫ್ ಇಂಡಿಯ" (ಭಾರತದ ಮಹಿಮೆ) ಮತ್ತು "ಇಮ್ಮಾರ್ಟಲ್ ಇಂಡಿಯ" (ಅಮರ ಭಾರತ) ಈ ಎರಡು ಕೃತಿಗಳು ತಯಾರಾದುವು.

ಚಲಚ್ಚಿತ್ರ ಕ್ಷೇತ್ರದಲ್ಲಿ ಜನತಾ ಕಲಾರಂಗವು "ಧರ್ತಿಕೆ ಲಾಲ್" ಚಿತ್ರವನ್ನು ತಯಾರಿಸಿ ಖ್ಯಾತಿ ಗಳಿಸಿತು ಇದು ಒಂದು ಸಾಹಸದ ಪ್ರಯೋಗವಾಗಿತ್ತು ಮತ್ತು ಜನತಾ ಕಲಾರಂಗದ ಫಾಸಿಸ್ಟ್ ವಿರೋಧಿ ಮತ್ತು ಬರಗಾಲ ವಿರೋಧಿ ಹೋರಾಟದಲ್ಲಿ ಮೈಲುಗಲ್ಲಾಗಿದ್ದುವು.

ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಿದ್ದ ಮತೀಯ ಗಲಭೆಗಳು ತಲೆದೋರಿದಾಗ ಜನತಾ ಕಲಾರಂಗ ಸುಮ್ಮನೆ ಕೂತಿರಲಿಲ್ಲ. ಮತೀಯ ಐಕ್ಯತೆಗಾಗಿ ದುಡಿಯಲು ಆರಂಭಿಸಿ, ಅವುಗಳಿಗೆ ಸಂಬಂಧಿಸಿ ನಾಟಕಗಳು ಮತ್ತು ಹಾಡುಗಳನ್ನು ರಚಿಸಿ, ದೊಡ್ಡ ಪ್ರಮಾಣದಲ್ಲಿ ಪ್ರದರ್ಶನಗಳನ್ನು ನಡೆಸಲಾಯಿತು

ರಂಗಭೂಮಿಯಲ್ಲಿ ಸುಧಾರಣೆ

ಕಲಾಕ್ಷೇತ್ರದಲ್ಲಿ ತಯಾರಿಕೆಯ ಕಾರ್ಯದಲ್ಲಿ ಜನತಾ ಕಲಾರಂಗ ಅನೇಕ ಸುಧಾರಣೆಗಳನ್ನು ತಂದು, ನಾವೀನ್ಯತೆಯನ್ನು ತಂದಿತು. ಆಂಧ್ರ ಪ್ರಾಂತದಲ್ಲಿ ಧ್ವನಿವರ್ಧಕ ಯಂತ್ರಕ್ಕೆ ಬದಲು, ನವೀನ ರೀತಿಯಲ್ಲಿ ಮಣ್ಣಿನಿಂದ ತಯಾರಿಸಲ್ಪಟ್ಟ ಕೊಳವೆಗಳನ್ನು ಉಪಯೋಗಿಸಲು ಆರಂಭಿಸಿದರು. ವಿದ್ಯುಚ್ಛಕ್ತಿ ಇಲ್ಲದ ಪ್ರದೇಶಗಳಲ್ಲಿ ಸಹಸ್ರಾರು ಮಂದಿ ಪ್ರೇಕ್ಷಕರಿಗೆ ಕೇಳಿಸುವಂತೆ ಮಾಡಲು ಇದು ಅನುಕೂಲವಾಗಿತ್ತು.

ದೆಹಲಿಯಲ್ಲಿ ಛಾಯಾ ನಾಟಕಗಳನ್ನು ತೋರಿಸುವುದರಲ್ಲಿ ಹೊಸ ಪ್ರಯೋಗವನ್ನು ನಡೆಸಿ ಯಶಸ್ವಿಯಾದರು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾಗಿರುವ ಈ ಛಾಯಾ ನಾಟಕಗಳ ತಯಾರಿಕೆಯಲ್ಲಿ ವಿದ್ಯುಚ್ಛಕ್ತಿಯ ಸಹಾಯವಿಲ್ಲದೆಯೇ ವರ್ಣರಂಜಿತವಾದ ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಕೇಂದ್ರತಂಡವು ರಂಗಮಂಟಪದ ಜೋಡನೆಗೆ ಮತ್ತು ಉಡುಪುಗಳಿಗೆ ಗೋಣಿನಾರಿನ ಬಟ್ಟೆಯನ್ನು ಬಳಸುವುದನ್ನು ಜಾರಿಗೆ ತಂದಿತು.

ಜಾನಪದ ಕಲೆಯ ಜೀರ್ಣೋದ್ಧಾರ

ಜಾನಪದ ಕಲೆಯ ಜೀರ್ಣೋದ್ಧಾರ ಕಾರ್ಯದಲ್ಲಿ ಜನತಾ ಕಲಾರಂಗ ಭೂಮಿಯು ಅಪಾರವಾದ ಸೇವೆ ಸಲ್ಲಿಸಿದೆ. ಈ ಸಂಸ್ಥೆಯು ಕಲಾಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

ಅದು ನಮ್ಮ ಸಂಪದ್ಯುಕ್ತವಾದ ಮತ್ತು ವೈವಿಧ್ಯಪೂರ್ಣವಾದ ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಮೇಲೆ ತಂದಿತು.

ಜನಪದ ಕಲೆಯಲ್ಲಿ ಪರಿಣಿತರಾಗಿದ್ದವರೇ ಅಲ್ಲದೆ, ಜನಸಾಮಾನ್ಯರಿಂದಲೇ ಬಂದ ನಟರು, ಗಾಯಕರು ಮತ್ತು ನರ್ತಕರು ಹಾಗೂ ಲೇಖಕರಿಗೆ ಅಪಾರವಾದ ಪ್ರೋತ್ಸಾಹವನ್ನು ನೀಡಿತು. ಚಳವಳಿಯಿಂದ ಬಂದ ಕಲಾವಿದರಲ್ಲಿ ಕಾರ್ಮಿಕರು, ರೈತರು ಮತ್ತು ಗುಮಾಸ್ತರು, ವಿದ್ಯಾರ್ಥಿಗಳೇ ಹೆಚ್ಚಿದ್ದರು. ಅಣ್ಣಾಬಾಹುಸಾಥೆ, ಅಮರ ಶೇಕ್, ದಶರಥ್‌ಲಾಲ್, ಶರ್ಮಾಲ್ಕರ್, ಅಪ್ಪನ್ನಿ, ಶೈಲೇಂದ್ರ, ಟಾಗಾರ್ ಅಧಿಕಾರಿ, ನಾಜರ್, ವಾಸಿರೆಡ್ಡಿ ಮತ್ತು ಸುಂಕಾರ ಮತ್ತಿತರರು ಕಾರ್ಮಿಕರು ಅಥವ ರೈತರಿಂದ ಬಂದವರಾಗಿದ್ದಾರೆ. ಪ್ರೇಮ್ ಧಾವನ್, ಸಲೀಲ್‌ಚೌಧುರಿ, ಗಾವಂಕರ್, ಕಾನು ಘೋಷ್, ಕೆ. ಎ. ಅಬ್ಬಾಸ್, ತ್ರಿಪಾತಿಮಿತ್ರ, ಪೋವಸೇನ್, ಬಾಲರಾಜಸಹಾನಿ, ಚೇತನ್, ಶಂಭು ಮಿತ್ರ ಅತ್ರೇಯ, ದೇವಾನಂದ್, ಹೇಮಂತ್ ಕುಮಾರ್ ಮತ್ತು ಇತರ ಅನೇಕರು ವಿದ್ಯಾರ್ಥಿವೃಂದ ಮತ್ತು ಬುದ್ಧಿಜೀವಿಗಳ ನಡುವಿನಿಂದ ಬಂದವರು.

ನಾಗಾಗಳು, ಜಯಂತಿಯಾಗಳು, ಸಂಥಾಲರು ಮತ್ತು ವಾರ್ಲಿಯ ಗುಡ್ಡಗಾಡಿನ ಸಮೂಹ ನೃತ್ಯ ಮತ್ತು ಗೀತವನ್ನು ಉತ್ತಮಗೊಳಿಸುವ ಕಾರ್ಯದಲ್ಲಿ ಕಲಾರಂಗ ಗಮನಾರ್ಹವಾದ ಕಾರ್ಯವನ್ನು ಸಾಧಿಸಿದೆ.

ಈ ಚಳವಳಿಯ ಮೂರನೆಯ ಸಾಧನೆಯೆಂದರೆ ಸಂಘಟನೆಯ ಮೂಲಕವಾಗಿ ಹೊಸ ಹೊಸ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದುದು. 1953ರಲ್ಲಿ ಮುಂಬಯಿಯಲ್ಲಿ ನಡೆದ ಅಖಿಲ ಭಾರತ ಜನತಾ ಕಲಾ ರಂಗದ ಏಳನೆಯ ಅಧಿವೇಶನವು ಚಳವಳಿಯಲ್ಲಿ ಹೊಸ ಹಾದಿಯನ್ನು ತೆರೆಯಿತು. ಈ ಸಮ್ಮೇಳನದಲ್ಲಿ ಜನತಾ ಕಲಾರಂಗದ ಘೋಷಣೆಯು ಅನುಮೋದಿಸಲ್ಪಟ್ಟಿತು. ಜನತೆಯ ಕಲೆಯನ್ನು ಉದ್ಭವಿಸುವುದರಲ್ಲಿ ಉದ್ಯುಕ್ತರಾಗಿರುವ ಎಲ್ಲ ಕಲಾವಿದರು ಮತ್ತು ಕಲಾಭಿಮಾನಿಗಳಿಗೂ ಅವರ ಅಭಿಪ್ರಾಯಗಳು ಏನೋ ಇರಲಿ, ಸಂಸ್ಥೆಗೆ ಸೇರಲು ಘೋಷಣೆಯಲ್ಲಿ ಸಾರಲಾಯಿತು. ಎಲ್ಲ ಪ್ರಾಂತಗಳಿಗೂ ತಮ್ಮ ತಮ್ಮ ಸಂಘಟನೆಯನ್ನು ತಮ್ಮದೇ ಆದ ರೀತಿಯಲ್ಲಿ ಬೆಳೆಸಲು ಸಂಪೂರ್ಣ ಸ್ವಾತಂತ್ರ್ಯವನ್ನೂ ನೀಡಲಾಯಿತು.

ಕಳೆದ ನಾಲ್ಕು ವರ್ಷಗಳಲ್ಲಿ ಜನತಾ ಕಲಾರಂಗವು ಅದ್ಭುತವಾದ ಪ್ರಗತಿಯನ್ನು ಸಾಧಿಸಿದೆ. ಅಡ್ಡಿಯಾಗಿದ್ದ ಎಲ್ಲ ತೊಡಕುಗಳನ್ನು ನಿರ್ಮೂಲಗೊಳಿಸಿದೆ. ಜನತಾ ಕಲಾರಂಗವು ಇನ್ನೂ ಹೆಚ್ಚು ಪ್ರಗತಿಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ.

ಜಾನಪದ ಕಲಾವಿದರಿಗೆ ಅಗತ್ಯವಿದ್ದ ಸಂಘಟನೆ ಈ ಕಾಲದಲ್ಲಿ ರೂಪುಗೊಂಡು ಅದ್ಭುತ ಪ್ರಗತಿಯನ್ನು ಸ್ಥಾಪಿಸಿದೆ. ಮುಂಬಯಿ ಸಮ್ಮೇಳನದಲ್ಲಿ ಘೋಷಿಸಲಾದ ಬೇಡಿಕೆಗಳನ್ನು ಎಲ್ಲ ಸಂಘಗಳು ಎತ್ತಿಕೊಂಡು ಚಳವಳಿ ನಡೆಸಿವೆ. ಸಂಗೀತ ನಾಟಕ ಅಕ್ಯಾಡಮಿ ನಾಟಕ ವಿಭಾಗವು ತನ್ನ ಸಲಹೆಗಳಲ್ಲಿ ಈ ಬೇಡಿಕೆಗಳನ್ನು ಸೇರಿಸಿವೆ ಜನತಾ ಕಲಾರಂಗವು ಮುಂದಿಸಿದ ಬೇಡಿಕೆಗಳು ಇಂದು ಭಾರತದ ಎಲ್ಲ ಸಾಂಸ್ಕೃತಿಕ ಕಾರ್ಯಕರ್ತರ ಬೇಡಿಕೆಯಾಗಿವೆ.

ಭಾರತದ

1918 : ಪ್ರಥಮ
ಸಂಘಟನೆಯಾದ
ಯೂನಿಯನ್ನಿನ

1918-20: ಪ್ರಥ
ದೇಶಾದ್ಯಂತ ಮ
ಗಳನ್ನು ನಡುಗಿ

1920 : ಲಾಲಾ
ರಾಗಿಯೂ, ಎ
ರು ಸ್ಥಾಪಕ
ಏ. ಐ. ಟಿ. ಯು.
ಲ್ಲಿಸ್ಥಾಪಿತವಾಯಿ
ಅವಧಿಯು ಗೆಲ್ಲ

1924 : ಕಾನ್ಪುರ
ಡಾಂಗೆ, ಮುರು
ತರರ ಬಂಧನ

1925 : ಆಲ್
ಫೆಡರೇಷನ್ ರಚ

1926: ಕಾರ್ಮಿಕ
ಕಟ್ಟುವ ಹಕ್ಕ
ಅಂಗೀಕರಿಸುವ
ಯೂನಿಯನ್
ಏ. ಐ. ಟಿ. ಯು.
ಪ್ರಥಮ ಕಮ
ಯವರ ಆಯ್ಕೆ

1927 : ಭಾರತದ
ಡೇ" ಆಚರಣೆ
ಉಪಕಾರ್ಯದರ್ಶಿ
ಡಾಂಗೆಯವರ

1928 : ಕೂಲಿ
ಬಯಿ ಗಿರಣಿ
ಮುಷ್ಕರ. ಗಿ
ಯನ್ನಿನ ಸ್ಥಾ
315 ಲಕ್ಷ
ಏ. ಐ. ಟಿ. ಯು.
ವೇಶನದಲ್ಲಿ,
ಕುಲಕರ್ಣಿಯ
ಹರಲಾಲ್ ನೆ

1929 : ಮೀರ
ಕಾರಸ್ಥಾನದ
ರಾದ 31 ಮಂ
ಚಳುವಳಿಯಲ್ಲಿ
ಸ್ಥಾನದಲ್ಲಿದ್ದು,
ವರ್ಷಗಳವರೆಗೆ

1929-30 : ಮ
ಕಾರ್ಮಿಕರ
ದ್ಯಂತ ಮುಷ್ಕ
1929-32ರ
ಗಳು ನಡೆದವು

1930 : ಏ. ಐ.
ಟ್ರೇಡ್ ಯು
ಉಂಟಾದ ಈ
38ರಲ್ಲಿ ನಡೆದ
ಸರಿಗೊಳಿಸಲ್ಪ

1936 : ಕಾರ್ಮಿ
ವನ್ನು ಕೊಡ
ಒತ್ತಾಯಿಸುವ
ಸ್ ಆಕ್ಟ್

ಇಂದಿನ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಹೊಸ ವಾತಾವರಣದಲ್ಲಿ ಜನತಾ ಕಲಾ ರಂಗವು ಹೊಸ ಘೋಷಣೆಯನ್ನು ಮೊಳಗಿಸಿದೆ. ಇಂದು ಅದು ಯಾವ ಒಂದು ಪಕ್ಷದ ಅಂಗವೂ ಆಗಿಲ್ಲ. ಅದು ಜನತೆಯ ಆಶೋತ್ತರಗಳನ್ನು ಎತ್ತಿ ಹಿಡಿಯುವ, ಅವರ ಸಾಂಸ್ಕೃತಿಕ ಬೇಡಿಕೆಗ

...ಡ್ ಯೂನಿಯನ್ ಚಳುವಳಿಯ ...ಮೈಲುಗಲ್ಲುಗಳು

...ಯೂನಿಯನ್ ...ಸು ಲೇಬರ್ ...ನಿಂತ ಚೆನ್ನಲ್ಲಿ ...ದಿದು ಕೈಗಾರಿಕೆ ...ಯಿಯ್ ಅಧ್ಯಕ್ಷ ...ಜೋಷಿಯವ ...ಬ್ಬರಾಗಿಯೂ ...ಮುಂಬಯಿಯ ...ಗಂಟೆ ಕೆಲಸದ ...ರ ಪೊಕದ್ದಮೆ. ...ಹಮ್ಮದ್ ಮತ್ತಿ ...ವರ್ಷ ಸಜಾ. ...ರೈಲ್ವೆಮನ್ ...ಯೂನಿಯನ್ ...ನು ಪ್ರಕಾರ ...ರ್ಯ ಟ್ರೇಡ್ ...ಕೃತವಾದುದು. ...ರ್ಯಕರ್ತರಾಗಿ, ...ಸ್. ವಿ. ಘಾಟೆ ...ಟೊದಲ "ನೇ ...ಐ.ಯು.ಸಿ.ಯ ...ಎಸ್. ಐ. ...ರುದ್ಧ ಮುಂ ...ಆರು ತಿಂಗಳ ...ಕಾರಿ ಯೂನಿ ...ಷ್ಕರಗಳಿಂದಾಗಿ ...ದಿನಗಳ ನಷ್ಟ. ...ರೋರಿಯಾ ಅಧಿ ...ರ್ಕ ಡಿ. ಬಿ. ...ಲಿಸಿ, ಜವಾ ...ರಾಗಿ ಆಯ್ಕೆ. ...ಗಳು ಮತ್ತು ... ಆಪಾದಿತ ... ಯೂನಿಯನ್ ...ಅಧಿಕಾರ ...ದ್ದಿಪೆ ಎರಡು ... ...ಐ.ಪಿ. ರೈಲ್ವೆ ...ಮತ್ತು ದೇಶಾ ...480 ಮುಷ್ಕರ ...ಯಲ್ಲಿ ವಿಭಜನೆ. ...ಚಳುವಳಿಯಲ್ಲಿ ...1935 ಮತ್ತು ...ಸಮ್ಮೇಳನದಲ್ಲಿ ...ದ ವೇತನ ...ಕಾಲಕರನ್ನು ...ಅರ್ಥ ವೇಟ ...ದು.

1938 : ಕಾನ್ಪುರ ಟೆಕ್ಸ್‌ಟೈಲ್ ಮಿಲ್ಸ್‌ನಲ್ಲಿ 50,000 ಕಾರ್ಮಿಕರನ್ನೊಳಗೊಂಡ ಸಾರ್ವತ್ರಿಕ ಮುಷ್ಕರ. ಕಡಿಮೆ ಕೂಲಿಯನ್ನು ವಿರೋಧಿಸಿ 25,000 ಜೂಟ್ ಕೆಲಸಗಾರರ ಮುಷ್ಕರ. ಇದರ ಬೆನ್ನ ಹಿಂದೆಯೇ ವಿವಿಧ ಕೈಗಾರಿಕೆಗಳಲ್ಲಿ 60,000 ಕಾರ್ಮಿಕರ ದೀರ್ಘಾವಧಿ ಕಾಲದ ಮುಷ್ಕರ.

1942 : ವಿದೇಶೀ ಆಳ್ವಿಕೆಯ ವಿರುದ್ಧ ವಿವಿಧ ಕೈಗಾರಿಕಾ ಕೇಂದ್ರಗಳಲ್ಲಿ ಮುಷ್ಕರಗಳು.

1945 : ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಸ್ಥಾಪನೆ. ಎ. ಐ. ಟಿ. ಯು. ಸಿ. ಯು ಇದರಲ್ಲಿ ಭಾಗವಹಿಸಿತು ಮತ್ತು ಅದರ ಸಂಸ್ಥಾಪಕ ಸದಸ್ಯರಲ್ಲೊಬ್ಬರಾದುದು.

1946-47 : ಯುದ್ಧಾನಂತರದ ಕೈಗಾರಿಕಾ ಅಶಾಂತಿ ಮತ್ತು ಮುಷ್ಕರಗಳ ಚಂಡಮಾರುತ. ಅಂಚೆ ನೌಕರರ ಅಖಿಲ ಭಾರತಾದ್ಯಂತ ಮುಷ್ಕರ ; 40,000 ದಕ್ಷಿಣ ಭಾರತ ರೈಲ್ವೆ ಕಾರ್ಮಿಕರ ಹೋರಾಟ ; ಕಲ್ಕತ್ತಾ ಟ್ರಾಂ ಕಂಪೆನಿಯ ಕಾರ್ಮಿಕರ ಮುಷ್ಕರಗಳು, ಮುಂಬೈನ ಬಿ.ಇ.ಎಸ್.ಟಿ. (BEST) ಮತ್ತು ಗುಜರಾತ್ ಗಿರಣಿ ಕಾರ್ಮಿಕರ ಮುಷ್ಕರ ನಡೆಯಿತು. ನಾವಿಕ ಪಡೆಯ (RIN) ಬಂಡಾಯಕ್ಕೆ ಬೆಂಬಲವಾಗಿ ಮುಂಬೈ ಕೆಲಸಗಾರರ ಮುಷ್ಕರ. 1946ರಲ್ಲಿ 8 ಗಂಟೆಯ ಕೆಲಸದ ಅವಧಿಯನ್ನು ಸಾಧಿಸಲಾಯಿತು.

1947 : ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ವಿಭಜನೆ; ಇಂಟಕ್ ಮತ್ತು ಸ್ವಲ್ಪ ಸಮಯದ ನಂತರ ಹೆಚ್.ಎಂ.ಎಸ್.ಗಳ ಹುಟ್ಟು.

1948-50 : ಜೈಲಿನಲ್ಲಿ, ಎ.ಐ.ಟಿ.ಯು.ಸಿ. ಕಾರ್ಯಕರ್ತರ ಮೇಲೆ ಹಿಂದೆಂದೂ ಕಾಣದ ಕ್ರೂರ ದಬ್ಬಾಳಿಕೆ.

1952 : ಆಹಾರ ಪರಿಹಾರ, ಒದಗಿಸುವುದರಲ್ಲಿ ಮಾಡಲಾದ ಕಡಿತದ ವಿರುದ್ಧ ಮುಂಬೈನಲ್ಲಿ ಎರಡು ಲಕ್ಷ ಕೆಲಸಗಾರರ ಒಂದು ದಿನದ "ಸಾರ್ವತ್ರಿಕ ಮುಷ್ಕರ."

1953 : ಅಧಿಕ ಟ್ರಾಂ ದರದ ವಿರುದ್ಧ ಟ್ರಾಂವೇ ಕಾರ್ಮಿಕರ ಮುಷ್ಕರ ಮತ್ತು ಆಹಾರ ಬೆಲೆಗಳಲ್ಲಿ ಕಡಿತವಾಗಬೇಕೆಂದು ಕಲ್ಕತ್ತಾದ 8 ಲಕ್ಷ ಕೆಲಸಗಾರರ ಸಾರ್ವತ್ರಿಕ ಮುಷ್ಕರ.

1954 : ಕಲ್ಕತ್ತದಲ್ಲಿ ನಡೆದ ಎ.ಐ.ಟಿ.ಯು.ಸಿ.ಯ 24ನೇ ಅಧಿವೇಶನ.

1955 : ಕಾನ್ಪುರ ಟೆಕ್ಸ್‌ಟೈಲ್ ಮಿಲ್ಸ್‌ನಲ್ಲಿ ರೇಷನಲೈಸೇಷನ್ನಿನ ವಿರುದ್ಧ 80 ದಿನಗಳ ಸಾರ್ವತ್ರಿಕ ಮುಷ್ಕರ. ಬೋನಸ್ಸಿಗಾಗಿ ಬಂಗಾಳದ ಎರಡೂವರೆ ಲಕ್ಷ ಟೀ ತೋಟ ಕಾರ್ಮಿಕರ ಮುಷ್ಕರ.

1957 : ದಿನನಿತ್ಯದ ಬಳಕೆಯ ವಸ್ತುಗಳ ಮೇಲಿನ ಎಕ್ಸೈಜ್ ಸುಂಕದ ಹೆಚ್ಚಳದ ವಿರುದ್ಧ ಒಂದು ದಿನದ ಸಾರ್ವತ್ರಿಕ ಮುಷ್ಕರ. ಪಶ್ಚಿಮ ಬಂಗಾಳದ ಬ್ಯಾಂಕ್ ನೌಕರರ ಮುಷ್ಕರ.

ಜೀವವಿಮಾ ಕಾರ್ಪೊರೇಷನ್ನಿಂದ ಸಾರ್ವಜನಿಕ ಹಣದ ಪೋಲು

ಮನ ಬಂದಂತೆ ಆಮದು ಲೈಸನ್ಸ್ ಇತ್ತು ನಮ್ಮ ದೇಶದ ವಿದೇಶೀ ವಿನಿಮಯದ ಆಧಾರವನ್ನು ಶಿಥಿಲಗೊಳಿಸಿದ, ವಿದೇಶೀ ನೆರವಿಗಾಗಿ ನಮ್ಮ ದೇಶದ ಸ್ವತಂತ್ರ ವಿದೇಶಾಂಗ ನೀತಿಯನ್ನು ಮಾರಲು ಯತ್ನಿಸಿದ ಅರ್ಥಮಂತ್ರಿ ಟಿ.ಟಿ.ಕೆ.ಯವರ ನೇತೃತ್ವದಲ್ಲಿ, ಸಾರ್ವಜನಿಕರ ಹಣದ ಮತ್ತೊಂದು ದುರ್ವ್ಯಯ ಪ್ರಕರಣ ಹೊರಬಂದಿದೆ.

ಜೀಪ್ ಪ್ರಕರಣ, ...ವೆ ಗೊಬ್ಬರದ ಪ್ರಕರಣ ಇತ್ಯಾದಿ ಕುಖ್ಯಾತ ಪ್ರಕರಣಗಳ ಮಾಲೆಯಲ್ಲಿ ಇದೀಗ ...ಂಧ್ರ ಪ್ರಕರಣ ಒಂದು ಹೊರಬಿದ್ದಿದೆ. ಈ ಪ್ರಕರಣದಲ್ಲಿ ಸುಮಾರು 1.56 ಕೋಟಿ ರೂ.ಗಳು ಒಳಗೊಂಡಿದ್ದು 36 ಲಕ್ಷ ರೂ.ಗಳು ನಷ್ಟವಾಗಿದೆ.

ಜೀವವಿಮಾ ಕಾರ್ಪೊರೇಷನ್ ರಚನೆಯಾಗಿ ದೇಶದಲ್ಲಿ ಜೀವವಿಮೆ ಉದ್ಯೋಗವು ರಾಷ್ಟ್ರೀಕರಣವಾಗಿದ್ದುದನ್ನು ಎಲ್ಲ ಪ್ರಜಾಪ್ರಭುತ್ವವಾದಿಗಳೂ ಸ್ವಾಗತಿಸಿದರು. ಸಾರ್ವಜನಿಕರ ಹಣಕ್ಕೆ ರಕ್ಷಣೆ ಸಿಕ್ಕಿತೆಂಬ ಭರವಸೆಯನ್ನು ಹೊಂದಿದ್ದ ಲಕ್ಷಾಂತರ ಮಂದಿ ಪ್ರೀಮಿಯಂದಾರರಿಗೆ, ಈ ದುರ್ವ್ಯಯ ಪ್ರಕರಣವು ಅಚ್ಚರಿಗೊಳಿಸುತ್ತದೆ.

ಕಳೆದ ಸೋಮವಾರದಂದು ಲೋಕಸಭೆಯಲ್ಲಿ ಫಿರೋಜ್ ಗಾಂಧಿಯವರು ಈ ಪ್ರಕರಣವನ್ನು ಹೊರಗೆಡಹಿದರು. ಜೀವವಿಮಾ ಕಾರ್ಪೊರೇಷನ್ ವಿಮಾ ಹಣವನ್ನು ಮುಂದ್ರ ಕಂಪನಿಯ ಲಾಭದಾಯಕವಾದ ಉದ್ದಿಮೆಗಳಲ್ಲಿನ ಷೇರುಗಳನ್ನು ಕೊಂಡು ಹಣವನ್ನು ಪೋಲು ಮಾಡಿದೆ. ಇದರಲ್ಲಿ ವಿನಿಯೋಗಿಸಿರುವ ಒಟ್ಟು ಹಣ ಸುಮಾರು 1.56 ಕೋಟಿ ರೂ.ಗಳು ಕಳೆದ ಮಾರ್ಚಿ ತಿಂಗಳಲ್ಲಿ ಇದನ್ನು ಕೊಳ್ಳಲು ಆರಂಭಿಸಿ, ಜೂನ್ 25ನೇ ತಾ॥ ಒಂದೇ ದಿನದಲ್ಲಿ 1.24 ಕೋಟಿ ರೂ.ಗಳಷ್ಟು ಬೆಲೆ ತೆತ್ತು ಷೇರುಗಳನ್ನು ಕೊಳ್ಳಲಾಗಿದೆ. ಅದು ಭಾನುವಾರದ ದಿನವಾಗಿದ್ದು ಸರಕಾರ ಮತ್ತು ವಿಮಾ ಕಾರ್ಪೊರೇಷನ್‌ಗೆ ರಜೆಯಾಗಿದ್ದರೂ ಕಾರ್ಪೊರೇಷನ್ನಿನ ಕೊಳ್ಳುವ ವಿಭಾಗದ ಡೈರೆಕ್ಟರುಗಳ ಸಮ್ಮತಿಯನ್ನು ಪಡೆಯದೆ ಕೊಳ್ಳಲಾಗಿದೆ. ಇದ ಯಾರ ಕೈವಾಡ?

ಸಾರ್ವಜನಿಕ ಹಣವು ಈ ರೀತಿ ಪೋಲಾಗುವುದಕ್ಕೆ ... ಮುಂದ್ರ ಕಂಪನಿಯ ಸಂಬಂಧಪಟ್ಟವರಾರೋ ಇದರಲ್ಲಿ ಸೇರಿರುವುದು ಖಂಡಿತ ಎಂದು ಬರುತ್ತದೆ. ಫಿರೋಜ್ ಗಾಂಧಿಯವರು ಮಾತನಾಡುತ್ತಾ "ಇದು ಬಂಡವಾಳ ಹಾಕುವುದಾಗಿಲ್ಲ. ಇದು ಕಾರ್ಪೊರೇಷನ್ನಿನ ಹಣವನ್ನು ಕಬಳಿಸಲು ಒಂದು ಕುತಂತ್ರ" ಎಂದು ಹೇಳಿದ್ದಾರೆ. ಕಮ್ಯೂನಿಸ್ಟ್ ನಾಯಕ ಡಾಂಗೆಯವರು ವ್ಯಂಗ್ಯವಾಗಿ "ಸಾರ್ವಜನಿಕ ಹಣವನ್ನು 'ಜಂಕ್' (ಹಾಳಾದ ಸಾಮಾನು)ಗಳನ್ನು ಕೊಳ್ಳಲು ಉಪಯೋಗಿಸುವುದು ಸರಕಾರದ ನೀತಿಯೋ ?" ಎಂದಿದ್ದಾರೆ.

ರಾಷ್ಟ್ರೀಕರಣವಾದ ಉದ್ಯಮದಲ್ಲಿ ಈ ರೀತಿ ಹಣವು ಪೋಲಾಗುವುದು ... ನೀಯವಾಗಿದೆ. ಅಲ್ಲದೆ ಇದು ರಾಷ್ಟ್ರೀಕೃತ ಉದ್ಯಮಗಳ ಪ್ರಯೋಜನ... ವುದಿಲ್ಲ, ... ಪ್ರಗತಿ ಸಾಧನೆ... ತ್ರಿಯ... ಪುಟಗೊಡುತ್ತದೆ. ... ಮಂತ್ರಿಗಳ, ಈ ಪ್ರಕರಣದ ಬಗ್ಗೆ ತನಿ... ನಡೆಸುವುದಾಗಿ ಆಶ್ವಾಸನೆ ಇತ್ತಿದ್ದಾರೆ. ಈಗಾಗಲೇ ಮೂರು ಮಂದಿಯನ್ನೊಳಗೊಂಡ ಸಮಿತಿ ರಚಿತವಾಗಿದೆ. ಸಮಿ... ತನಿಖೆಯನ್ನು ನಡೆಸಿ ಸಂಬಂಧಪಟ್ಟ ದ್ರೋಹಿಗಳನ್ನು ಶಿಕ್ಷಿಸುವುದೇ ಇಲ್ಲವೆ ಎಂದಿನಂತೆ ಮುಚ್ಚಿಡಲಾಗುವುದೇ ಎಂದು ನೋಡಬೇಕಿದೆ. ಈ ಹೊಲಸು ಪ್ರಕರಣವು ಹಾಗೇ ಗಾಳಿಗೆ ಹೋಗದಂತೆ ಮಾಡಿ ಸರಿಯಾದ ವಿಚಾರಣೆಯಾಗಬೇಕೆಂದು ಜನತೆ ಒತ್ತಾಯ ತರಬೇಕಿದೆ.

ಅನ್ನು ಪೂರಯಿಸಲು ಯತ್ನಿಸುವ ಸಂಸ್ಥೆಯಾಗಿ ಬೆಳೆದಿದೆ.

ಡಿಸೆಂಬರ್ 23ರಿಂದ ಆರಂಭವಾಗಿರುವ ಈ ಸಮ್ಮೇಳನವನ್ನು ಭಾರತದ ಉಪ ರಾಷ್ಟ್ರಪತಿ ಡಾ॥ ಎಸ್. ರಾಧಾಕೃಷ್ಣನ್‌ರವರು ಉದ್ಘಾಟಿಸಿದ್ದಾರೆ. ಸಮ್ಮೇಳನಕ್ಕೆ ಯಶಸ್ಸು ಕೋರಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸಂದೇಶವನ್ನು ಕಳುಹಿದ್ದಾರೆ. ಭಾರತದ ಎಲ್ಲ ಪ್ರಾಂತಗಳಿಂದಲೂ ಕಲಾವಿದರು, ನಾಟಕದ ತಂಡಗಳು ಸಮ್ಮೇಳನದಲ್ಲಿ ಭಾಗವಹಿಸಿವೆ. ಅತ್ಯುತ್ತಮವಾದ ನಾಟಕಗಳು, ನೃತ್ಯಗಳು, ಜನಪದ ಗೀತೆಗಳು ಈ ಸಮ್ಮೇಳನದ ಅಂಗವಾಗಿ ಪ್ರದರ್ಶಿಸಲ್ಪಡುತ್ತಿವೆ.

ದೆಹಲಿಯಲ್ಲಿ ನಡೆದ ... ಜನತಾ ಕಲಾರಂಗದ ಸಮ್ಮೇಳನವು ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೊಸ ಯುಗವನ್ನು ಸ್ಥಾಪಿಸುವುದರಲ್ಲಿ ಸಂದೇಹವಿಲ್ಲ.

25—8—57

ವಿರೋಧ ಪಾರ್ಟಿಗಳ ಮೇಲೆ ಪೋಲೀಸರ ಉಪಟಳ

ಕಾಂಗ್ರೆಸ್ ಆಡಳಿತದಲ್ಲಿ ವಿರೋಧ ಪಕ್ಷಗಳವರಿಗೆ ಉಪಟಳ ಕೊಡುವುದು ಪರಂಪರೆಯಾಗಿದೆ. ಪ್ರಜಾಪ್ರಭುತ್ವವಾದಿಗಳು ತಾವೆಂದೂ, ತಮಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ವಿರೋಧ ಪಕ್ಷಗಳಿಗೂ ಇದೆಯೆಂದೂ ಹೇಳಿಕೊಳ್ಳುವ ಕಾಂಗ್ರೆಸ್ ಸರ್ಕಾರ ಕಾರ್ಯರೂಪದಲ್ಲಿ ಸಾಕಷ್ಟು ಕಿರುಕುಳ ಕೊಡುತ್ತದೆ. ವಿರೋಧ ಪಕ್ಷಗಳಲ್ಲೆಲ್ಲಾ ಕಮ್ಯೂನಿಸ್ಟ್ ಪಕ್ಷದ ಮೇಲೆ ಕಾಂಗ್ರೆಸ್ ಸರ್ಕಾರದ ವಕ್ರದೃಷ್ಟಿ ಯಾವಾಗಲೂ ಇದೆ.

ಕಮ್ಯೂನಿಸ್ಟ್ ಪಾರ್ಟಿಯ ಕಚೇರಿಗಳ ಸುತ್ತಲೂ ಸಿ.ಐ.ಡಿ ಗಳ ತಂಡ ಅಹರ್ನಿಶಿ ಕಾವಲಿರುತ್ತದೆ. ಯಾರು ಬರುತ್ತಾರೆ, ಯಾರು ಹೋಗುತ್ತಾರೆ ಎನ್ನುವುದರ ಪಟ್ಟಿ ಇಡಲಾಗುತ್ತದೆ. ಹೊಸಬರಾದರೂ ಬಂದಲ್ಲಿ ಅವರ ಬೆನ್ನು ಹತ್ತಿ ಅವರನ್ನು ಸಿ.ಐ.ಡಿ ಗಳು ತೊಂದರೆಗೀಡು ಮಾಡುತ್ತಾರೆ.

ಕಮ್ಯೂನಿಸ್ಟ್ ಕಾರ್ಯಕರ್ತರಿಗೆ ಮತ್ತು ಕಚೇರಿಗೆ ಬರುವ ಎಲ್ಲ ಪತ್ರಗಳನ್ನು ... ಪತ್ರಗಳನ್ನು ಸಹ ಪೋಲೀಸರು ಸೆನ್ಸಾರ್ ಮಾಡಿ ನೋಡುತ್ತಾರೆ. ಕಾ...ದ ಗಮನಕ್ಕೆ ತಂದರೂ ಅದು ನಿರರ್ಥಕವಾಗಿದೆ. ನಾಗರಿಕ ರಾಜ್ಯವೆನಿಸಿಕೊಂಡ ಯಾವ ಸರಕಾರವೂ ಈ ಕೃತ್ಯವೆಸಗುವುದಿಲ್ಲ.

ರಾಜ್ಯಸಭೆಯಲ್ಲಿ ಕಮ್ಯೂನಿಸ್ಟ್ ನಾಯಕರಾದ ಭೂಪೇಶ್‌ಗುಪ್ತರವರು ತ... ಟೆಲಿಫೋನ್ ಬಳಸಿದಾಗಲೆಲ್ಲಾ ಪೋಲೀಸರು ಬೇರೆ ಯಂತ್ರದ ಸಹಾಯದಿಂದ ಸಂಭಾಷಣೆಯನ್ನು ಕೇಳುತ್ತಾರೆಂದು ಆರೋಪಿಸಿ, ಪಾರ್ಲಿಮೆಂಟ್ ಸದಸ್ಯರಾದ ತಮ್ಮ ಟೆಲಿಫೋನ್ ಈ ರೀತಿಯಲ್ಲಿ ಪೋಲೀಸರ ತನಿಖೆಗೆ ಗುರಿಯಾಗಿರುವುದರಿಂದ ಕೆಲಸಕ್ಕೆ ಅಡ್ಡಿ ಬರುತ್ತಿದೆಯೆಂದು ಹಕ್ಕು ಬಾಧ್ಯತೆ ಪ್ರಶ್ನೆಯನ್ನೆತ್ತಿದ್ದಾರೆ.

ಟೆಲಿಫೋನ್ ಸಂಭಾಷಣೆಯನ್ನು ಕೇಳುವುದು ವಿಶೇಷ ಪರಿಸ್ಥಿತಿಗಳಲ್ಲಿ, ಹೆಚ್ಚಾಗಿ ಯುದ್ಧ ಕಾಲದಲ್ಲಿ ಅನುಮಾನಿತರಾದವರ ಮೇಲೆ ನಡೆಸುವ ಅನಾಗರಿಕ ಪ್ರವೃತ್ತಿ ಕೆಲವೆಡೆಗಳಲ್ಲಿದೆ. ಆದರೆ ನಮ್ಮ ಕಾಂಗ್ರೆಸ್ ಆಡಳಿತದಲ್ಲಿ ಸದಾಕಾಲದಲ್ಲಿಯೂ ಇದು ನಡೆಯುತ್ತಿದೆ. ಗೃಹಸಚಿವ ಪಂತ್‌ರವರು ಇದನ್ನು ತನಿಖೆ ಮಾಡುವುದಾಗಿ ತಿಳಿಸಿ ನಂತರ ಹಾಗೆ ಮಾಡುತ್ತಿಲ್ಲವೆಂದು ತಮಗೆ ತಿಳಿದು ಬಂದಿರುವುದಾಗಿ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಹಕ್ಕುಬಾಧ್ಯತೆ ಪ್ರಶ್ನೆಯನ್ನು ಭೂಪೇಶಗುಪ್ತರು ಎತ್ತಿದರೂ ಸಮಿತಿಯ ಮುಂದೆ ಇಡಲು ಯಾವ ಪುರಾವೆಯೂ ದೊರಕುವುದು ... ಟೆಲಿಫೋನ್ ಟ್ಯಾಪ್ ಮಾಡುತ್ತಿರುವುದು ಖಂಡಿತವಾದ ಅಂಶ. ಕಾಂಗ್ರೆಸ್ ಸರಕಾರವು ಈ ಅನಾಗರಿಕ ನೀತಿಯನ್ನು ಕೈಬಿಟ್ಟು ಇನ್ನು ಮುಂದೆಯಾದರೂ ಈ ಕಿರುಕುಳವನ್ನು ತಪ್ಪಿಸುವುದೇ ?

1957ರಲ್ಲಿ ರಷ್ಯದಲ್ಲಿ ಔದ್ಯೋಗಿಕ ಉತ್ಪನ್ನದಲ್ಲಿ ಶೇಕಡ 10ರಷ್ಟು ಹೆಚ್ಚುವರಿ

ಸೋವಿಯತ್ ಯೂನಿಯನಿನಲ್ಲಿ 1957ರ ವರ್ಷದಲ್ಲಿ ಔದ್ಯೋಗಿಕ ಉತ್ಪನ್ನದಲ್ಲಿ ಶೇ. 10ರಷ್ಟು ಹೆಚ್ಚುವರಿಯಾಗಿದೆಯೆಂದೂ ಯೋಜನೆಯಲ್ಲಿ ಗೊತ್ತುಮಾಡಲಾಗಿದ್ದ ಶೇ. 7 1ಕ್ಕಿಂತ ಅಧಿಕವಾಗಿದೆಯೆಂದೂ ಯೋಜನಾ ಆಯೋಗದ ಅಧ್ಯಕ್ಷ ಜೋಸೆಫ್ ಕುಜ್‌ಮಿನ್ ಸುಪ್ರೀಂ ಸೋವಿಯತ್ ಅಧಿವೇಶನದಲ್ಲಿ ತಿಳಿಸಿದ್ದಾರೆ. ಬಳಕೆಯ ಪದಾರ್ಥಗಳ ಉತ್ಪಾದನೆಯು ಶೇ 8ರಷ್ಟು ಹೆಚ್ಚಾಗಿದೆಯೆಂದೂ, ರಾಷ್ಟ್ರೀಯ ಉತ್ಪನ್ನವು ಸುಮಾರು ಶೇಕಡ 6ರಷ್ಟು ಅಧಿಕಗೊಂಡಿದೆಯೆಂದೂ ತಿಳಿಸಿದ್ದಾರೆ.

ಪ್ರಸಕ್ತ ಪಂಚವಾರ್ಷಿಕ ಯೋಜನೆಯ ವರುಷದಲ್ಲಿ ಎಲ್ಲ 15 ರಿಪಬ್ಲಿಕ್‌ಗಳಲ್ಲಿ ಔದ್ಯೋಗಿಕ ಉತ್ಪನ್ನವು ಹೆಚ್ಚಾಗಿದೆ. ಉಕ್ಕಿನ ತಯಾರಿಕೆಯು ಎರಡು ಮಿಲಿಯ ಟನ್‌ಗಳಷ್ಟು, ಕಲ್ಲಿದ್ದಲು ತಯಾರಿಕೆ 33 ಮಿಲಿಯ ಟನ್‌ಗಳಷ್ಟು ಮತ್ತು ಎಣ್ಣೆಯ ತಯಾರಿಕೆಯು ಶೇ 16ರಷ್ಟೂ, 1956ರಲ್ಲಿದ್ದ ಉತ್ಪನ್ನಕ್ಕಿಂತ ಹೆಚ್ಚಾಗಿದೆ. 1956ಕ್ಕಿಂತಲೂ 18,000 ಮಿಲಿಯ ಕಿಲೋವಾಟ್‌ಗಳು ಅಧಿಕ ವಿದ್ಯುಚ್ಛಕ್ತಿ ಉತ್ಪಾದನೆಯಾಗಿದೆ.

ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಸೋವಿಯತ್ ಯೂನಿಯನ್ ಅದ್ಭುತವಾದ ಪ್ರಗತಿಯನ್ನು ಸಾಧಿಸಿದೆ.

1958ರ ಸಾಲಿನ ಬಜೆಟ್ಟನಲ್ಲಿ ಸೋವಿಯತ್ ಯೂನಿಯನ್ ರಕ್ಷಣಾ ವೆಚ್ಚವನ್ನು 800 ಮಿಲಿಯ ರೂಬಲುಗಳಷ್ಟು ತಗ್ಗಿಸಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಹಣವನ್ನು ಹೆಚ್ಚಾಗಿ ಖರ್ಚು ಮಾಡಲಾಗುವುದೆಂದು ಹೇಳಲಾಗಿದೆ.

ಸೋವಿಯತ್ ಜನತೆಗೆ ಮುಂದಿನ ಸಾಲಿನಲ್ಲಿ ಅನೇಕ ರಿಯಾಯಿತಿಗಳನ್ನು ತೋರಲಾಗಿದೆ. ತೆರಿಗೆ ವಿಷಯದಲ್ಲಿ ಗಣನೀಯವಾಗಿ ಕಡಿಮೆ ಮಾಡಲಾಗಿದೆ. ಸಂಸಾರಸ್ಥರಲ್ಲದ ಮತ್ತು ಸಣ್ಣ ಸಂಸಾರವಿರುವ ಮತ್ತು ಮಕ್ಕಳಿಲ್ಲದ ವಿಧವೆಯರು ಹಾಗೂ ಮದುವೆಯಾಗದೆ ಇರುವ ಸ್ತ್ರೀಯರು ಇವರುಗಳ ಮೇಲೆ ವಿಧಿಸಲಾಗಿದ್ದ ತೆರಿಗೆಯನ್ನು ಮನ್ನಾಮಾಡಲಾಗಿದೆ. ಇದರಿಂದ ತೆರಿಗೆ ತೆರುತ್ತಿದ್ದ ಶೇ 85ರಷ್ಟು ಮಂದಿಗೆ ಲಾಭವಾಗುತ್ತದೆ.

ಜನರಿಂದ ವಸೂಲು ಮಾಡುತ್ತಿದ್ದ ಒಟ್ಟು ತೆರಿಗೆಯ ಅಂಶವು 1957ರಲ್ಲಿದ್ದ ಶೇಕಡ 8·7ರಿಂದ 7·8ಕ್ಕೆ 1958ರಲ್ಲಿ ಇಳಿಸಲಾಗುವುದು.

ಸೋವಿಯತ್ ಯೂನಿಯನಿನ ಸುಪ್ರೀಂ ಸೋವಿಯತ್‌ನ ಪ್ರಸಕ್ತ ಅಧಿವೇಶನದಲ್ಲಿ ಬಜೆಟ್ಟಿನಲ್ಲಿ ಜನತೆಗೆ ಕೊಡಲಾಗಿರುವ ರಿಯಾಯಿತಿಗಳು ಗಮನಾರ್ಹವಾಗಿವೆ.

(೨ನೇ ಪುಟದಿಂದ)

ಕಡಿಮೆ ಮಾಡುವುದರಲ್ಲಿ ಅವರು ತೊಡಗಬೇಕು.

5. ನ್ಯಾಟೋ ಮತ್ತು ವಾರ್ಸಾ ಒಪ್ಪಂದ ರಾಷ್ಟ್ರಗಳ ನಡುವೆ ನಿರಾಕ್ರಮಣ ಒಪ್ಪಂದವಾಗಬೇಕು;

6. ಮಧ್ಯಪ್ರಾಚ್ಯದಲ್ಲಿ ಬಲಪ್ರಯೋಗವನ್ನು ಕೈಬಿಡಬೇಕು, ಮತ್ತು

7. ಯುದ್ಧ ಪ್ರಚೋದನೆಯ ಮೇಲೆ ಬಹಿಷ್ಕಾರ ಹಾಕಬೇಕು.

ಜನವರಿ 1958ರಿಂದ ಅಣುಶಸ್ತ್ರಗಳ ಪ್ರಯೋಗವನ್ನು ನಿಲ್ಲಿಸಬೇಕೆಂದು ಸಲಹೆ ಮಾಡಲಾಗಿದೆ.

ರೈತರ ಸಭೆಗಳು

(೬ನೇ ಪುಟದಿಂದ)

ಯರ್ದರ್ಶಿಗಳಾಗಿ ಇರುವ 9 ಮಂದಿ ಸದಸ್ಯರುಳ್ಳ ಸರ್ಕಲ್ ಸಮಿತಿಯೊಂದನ್ನು ರಚಿಸಲಾಯಿತು.

ಸೋಮೇಶ್ವರ

ತಾ. 13—12—57ರಂದು ಸೋಮೇಶ್ವರ ಗ್ರಾಮದ ರೈತರ ಸಭೆಯು ಶ್ರೀ ಚಿನ್ನಪ್ಪ ನ್ಯಾಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಕೊರಗಪ್ಪ ರೈಯವರು ಜಿಲ್ಲಾ ರೈತಸಮಿತಿಗೆ ನಿಧಿಸಂಗ್ರಹ, ರೈತರ ಒಗ್ಗಟ್ಟು ಇವುಗಳ ಕುರಿತು ಮಾತನಾಡಿದರು.

ಉಳ್ಳಾಲ

ತಾ. 15—12—57ರಂದು ಉಳ್ಳಾಲ ಗ್ರಾಮದ ರೈತರ ಸಭೆಯು ಶ್ರೀ ಬಿ. ಕೊರಗಪ್ಪ ರೈಯವರ ಅಧ್ಯಕ್ಷತೆಯಲ್ಲಿ ತೊಕ್ಕೊಟು ಆಫೀಸಿನಲ್ಲಿ ಜರಗಿತು. ಜಿಲಾ ಸಮಿತಿಯ ನಿರ್ಣಯದಂತೆ ನಿಧಿ ಸಂಗ್ರಹಿಸಲು ಕಾರ್ಯಕ್ರಮ ಹಾಕಲಾಯಿತಲ್ಲದೆ 11 ಮಂದಿ ಸದಸ್ಯರುಳ್ಳ ಗ್ರಾಮದ ರೈತ ಸಮಿತಿಯೊಂದನ್ನು ಆರಿಸಲಾಯಿತು.

ಕೋಟೆಕಾರ್

ತಾ. 17—12—57ರಂದು ಕೋಟೆಕಾರು ಗ್ರಾಮದ ರೈತರ ಸಭೆಯು ಸಮಿತಿಯ ಅಧ್ಯಕ್ಷ ಶ್ರೀ ಎಂ. ತ್ಯಾಂಪಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಂ. ಎಚ್ ಕೃಷ್ಣಪ್ಪ, ಬಿ. ಕೃಷ್ಣದಾಸ್, ಕೆ ಕೃಷ್ಣಪ್ಪ, ಬಿ. ಕೊರಗಪ್ಪ ರೈ ಮೊದಲಾದವರು ರೈತರ ಮುಂದಿರುವ ಸಮಸ್ಯೆಗಳ ಕುರಿತು ಮಾತಾಡಿದರು. ಜಿಲ್ಲಾ ರೈತ ಸಮಿತಿಯ ನಿಧಿ ಸಂಗ್ರಹಕ್ಕೆ 11 ಮಂದಿ ಸದಸ್ಯರುಳ್ಳ ಕಮಿಟಿಯೊಂದನ್ನು ರಚಿಸಲಾಯಿತು.

ಹರೇಕಳ

ತಾ. 20—12—57ರಂದು ಹರೇಕಳ ಗ್ರಾಮದ ರೈತರ ಸಭೆಯು ಶ್ರೀ ಕೆ. ನಾರಾಯಣ ನ್ಯಾಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಕೊರಗಪ್ಪ ರೈಯವರು ರೈತರು ಒಗ್ಗಟ್ಟಾಗಬೇಕಾದ ಅವಶ್ಯಕತೆಯ ಕುರಿತು ಮಾತಾಡಿದರು. ಕೊನೆಗೆ ಶ್ರೀ ಗಿರಿಯಪ್ಪ ಪೂಜಾರಿ ಕಾರ್ಯದರ್ಶಿಯಾಗಿ 7ಮಂದಿ ಸದಸ್ಯರುಳ್ಳ ಗ್ರಾಮದ ರೈತ ಸಮಿತಿಯೊಂದನ್ನು ರಚಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಮ್ಮೇಲನದ ನಿರ್ಣಯಗಳನ್ನೊಳಗೊಂಡ ಮನವಿಗೆ ಸಹಿ ಸಂಗ್ರಹಿಸಲು ಎಲ್ಲ ಸಭೆಗಳಲ್ಲೂ ಕಾರ್ಯಕ್ರಮಗಳನ್ನೂ ಹಾಕಿದ್ದಲ್ಲದೆ ಸಹಿ ಸಂಗ್ರಹ ಕಾರ್ಯವು ನಡೆಯುತ್ತಿದೆ.

ಕೋಟೆಕಾರ್ ಸರ್ಕಲ್ ಪಾರ್ಟಿ ಸದಸ್ಯರ ಸಭೆ

ತಾ. 18—12—57ರಂದು ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೋಟೆಕಾರ್ ಸರ್ಕಲ್ ಪಾರ್ಟಿ ಸದಸ್ಯರ ಮಹಾ ಸಭೆಯು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾ|| ಎ. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕೋಟೆಕಾರು ಸರ್ಕಲಿನ ಪಾರ್ಟಿ ಸದಸ್ಯರ ಚಟುವಟಿಕೆಗಳ ವಿಷಯವಾಗಿ ಕಾರ್ಯದರ್ಶಿ ಕಾ|| ಬಿ. ಕೊರಗಪ್ಪ ರೈಯವರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಕೇಂದ್ರ ಸಮಿತಿಯ ನಿರ್ಣಯ ಮತ್ತು ಪ್ರಾಂತ ಸಮ್ಮೇಳನದ ವಿಚಾರವಾಗಿ ಮಾತಾಡಿದರು. ಕರ್ನಾಟಕ ಪ್ರಾಂತ ವಾರ್ಷಿಕ ಸಮ್ಮೇಳನಕ್ಕೆ ಸರ್ಕಲಿನಿಂದ ಇಬ್ಬರು ಪ್ರತಿನಿಧಿಗಳನ್ನು ಚುನಾಯಿಸಲಾಯಿತು.

ಬೆಂಗಳೂರಿನಲ್ಲಿ ಬಿಶಪರುಗಳ ಸಮ್ಮೇಳನದ ನಿರ್ಣಯ

(೯ನೇ ಪುಟದಿಂದ)

ವೆಂದು ತಿಳಿಯುವ ತಾಳ್ಮೆ ಇವರಿಗಿಲ್ಲವೆಂಬಂತೆ ವರ್ತಿಸುವುದು ಧಾರ್ಷ್ಟ್ಯದ ಪರಮಾವಧಿ.

ಭಾರತದ ಘಟನಾ ವಿರೋಧಿಗಳಿಗೆ ಇತ್ತೀಚಿಗೆ ನಮ್ಮ ಮುಖ್ಯ ಮಂತ್ರಿಗಳಾದ ಪಂಡಿತ್ ನೆಹರೂರವರು ಎಚ್ಚರಿಕೆ ಇತ್ತುದನ್ನು ನಾಗರಿಕರು ನೆನಪಿಗೆ ತಂದ.ಕೊಳ್ಳಬೇಕು. "ರಾಜ್ಯಘಟನೆಯನ್ನು ಒಪ್ಪಲು ಸಾಧ್ಯವಿಲ್ಲದವರು ಗಂಟುಮೂಟೆಯನ್ನು ಕಟ್ಟಿ ತೊಲಗಿರಿ" ಎಂದು ಸೂಚಿಸಿದ್ದಾರೆ. ಇದು ನ್ಯಾಯವಾದ ಮಾತು· ಆದರೂ ಭಾರತದ ಪ್ರಜೆಯೊಬ್ಬನಿಗೆ ಕೊಟ್ಟ ಹಕ್ಕನ್ನು ಕಸಿದುಕೊಳ್ಳುವ ಹಕ್ಕು ಮತದ ಮುಂದಾಳುವಿಗೆ ಇದ್ದರೆ ಇದು ರಾಜ್ಯಘಟನೆಗೊಂದು ಅಪಮಾನ ಮಾಡಿದಂತಾಗಲಿಲ್ಲ? ಅಷ್ಟೇ ಅಲ್ಲ ಇದರ ವಿರುದ್ಧ ಪಂಥಾಹ್ವಾನ ಕೊಟ್ಟಂತಾಗುವುದಿಲ್ಲವೆ? ಇದು ಕೇವಲ ಸಾಮಾನ್ಯ ಒಂದು ವಿಚಾರವಲ್ಲ ದೇಶದ ಪ್ರತಿಯೊಂದು ಪ್ರಜೆಗೂ ಸಂಬಂಧಿಸಿದ ಪ್ರಶ್ನೆ; ಇದರಲ್ಲಿ ಪಾರ್ಟಿ-ಪಂಗಡಗಳ ಪ್ರಶ್ನೆ ಕೂಡದು.

ಆದ್ದರಿಂದ ಸರಕಾರವೂ, ಜನ ಪ್ರತಿನಿಧಿಗಳೂ ಈ ನಿರ್ಣಯ ಕೈಕೊಂಡ ಧರ್ಮಾಧಿಕಾರಿಗಳನ್ನು ಕೂಡಲೆ ಎಚ್ಚರಿಸಬೇಕು. ಈಮತಾಧಿಕಾರಿಗಳ ಈಬಗ್ಗೆ ತಮ್ಮ ನಿರ್ಣಯಗಳನ್ನು ಪುನರ್ವಿಮರ್ಶಿಸಬೇಕು. ಭಾರತದ ಘಟನೆಗಾದ ಅವಮಾನವನ್ನು ಬಹಿರಂಗವಾಗಿ ತಿದ್ದುವಂತಾಗಬೇಕು.

—ಓರ್ವ ಕೆಥೋಲಿಕ್ ನಾಗರಿಕ

— ಓದುಗರ ಓಲೆ —

(೮ನೇ ಪುಟದಿಂದ)

ಇಟ್ಟುಕೊಂಡಿರೋದು ಮತ್ತೆ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸೂಕ್ತ ಚರ್ಚೆಗಾಗಿ ಸಭೆ ಕರೆಯದೇ ಇರೋದು ಮೊದಲಾದುದರಿಂದಾಗಿ ಷೇರುದಾರರಿಗೆ ಈಗಾಗಲೇ ಬೇಸರಹುಟ್ಟಿದೆ.

ಇನ್ನು ಮುಂದಾದರೂ ಈ ಸಹಕಾರಿ ಚಳವಳಿಗೆ ಸಂಬಂಧ ಪಟ್ಟ ಅಧಿಕಾರಿಗಳು ಇಂಥಾ ಅವ್ಯವಸ್ಥೆ ಉಂಟಾಗದಂತೆ ನೋಡಿಕೊಳ್ಳುವರೆಂದು ನಂಬಿರುವ,

"ಗುಪ್ತ"—ಬಿದನೂರು

[ನಮ್ಮ ರಾಜ್ಯದಲ್ಲಿ ಸಹಕಾರಿ ಚಳವಳಿಯ ಕತ್ತು ಹಿಸುಕಲಾಗುತ್ತಿದೆಯೇ ಹೊರತು, ಅದನ್ನು ಸರಕಾರ ಬೆಂಬಲಿಸುವುದಿಲ್ಲವೆಂದು, ಬೆಂಗಳೂರು ಕೆಂಟೋನ್‌ಮೆಂಟ್ ಸಹಕಾರಿ ಸಂಸ್ಥೆಯುಲ್ಲಾದ ಹಣದ ಪೋಲಿನಿಂದ ತಿಳಿದು ಬಂದಿದೆ ಈ ಸಂಸ್ಥೆಯು ಲಿಕ್ವಿಡೇಷನ್ ಆಗಬೇಕೆಂದು ಸರಕಾರದ ಸಬ್ ರಿಜಿಸ್ಟ್ರಾರರೇ ವಿಚಾರಣೆ ನಡೆಸಿ ಬರೆದಿದ್ದರೂ ಇನ್ನೂ ·ಲಿಕ್ವಿಡೇಷನ್ ಕ್ರಮ ತೆಕ್ಕೊಂಡದ್ದಿಲ್ಲ. ಈ ಗೃಹ ನಿರ್ಮಾಣ ಸಹಕಾರ ಚಳುವಳಿಯೂ ಇಂಥ ಅಂತ್ಯವನ್ನು ಕಾಣದಿದ್ದರೆ ಸಾಕು—! ಸಂ]

ರೈತರ ಮೇಲೆ ಕಾಂಗ್ರೆಸ್ ಅಧ್ಯಕ್ಷರ ಧಾಳಿ

ತಾ|| 16-12-57ರಂದು ಹಾವೇರಿ ತಾಲ್ಲೂಕು ಹಿರೇಲಿಂಗದಹಳ್ಳಿಯಲ್ಲಿ ಬೆಳಗ್ಗೆ ಸುಮಾರು 9-10 ಘಂಟೆಯ ಸಮಯಕ್ಕೆ ಕಾಂಗ್ರೆಸ್ ಪುಢಾರಿಗಳ ಪ್ರಚೋದನೆಯಿಂದ, ನಿರಪರಾಧಿ ಸಂಭಾವಿತ ರೈತರ ಮೇಲೆ ಅಮಾನುಷ ರೀತಿಯ ಭೀಕರ ಧಾಳಿ ನಡೆಯಿತು.

ಧಾಳಿಕೋರರು ಕೇವಲ ರಸ್ತೆಯ, ಅಂಗಳ ಕಸ ಗುಡಿಸುವ ನೆವ ಮಾಡಿ, ಗುಂಪು ಕಟ್ಟಿಕೊಂಡು ಬಂದು ನಿರಪರಾಧಿ ರೈತರ ಮನೆ ಹೊಕ್ಕು ಕೋಲು-ಬಡಿಗೆಗಳಿಂದ ಹೊಡೆಯುತ್ತಿದ್ದರು. ಹೊಡೆಯುವಾಗ್ಗೆ ಹಾವೇರಿ ತಾಲ್ಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಶಿವಬಸಪ್ಪ ಬಶೆಟ್ಟಿ ಸಾ|| ಕುರುಬಗೊಂಡ ಇವರ ಪಾರ್ಟಿಯವರೆಂದೂ ಕೂಗಾಡುತ್ತಿದ್ದರು. ಅಲ್ಲದೆ ಸದರೀ ಕಾಂಗ್ರೆಸ್ ಅಧ್ಯಕ್ಷರ ವಿರುದ್ಧ ಯಾರಾದರೂ ರಾಜಕೀಯದಲ್ಲಾಗಲೀ, ವ್ಯವಹಾರದಲ್ಲಾಗಲೀ ಕೆಲಸ ಕಾರ್ಯ ನಡೆಸಿದರೆ ನಿಮ್ಮನ್ನು ನಾಪತ್ತೆ ಮಾಡುತ್ತೇವೆಂದು ಪ್ರಾಣಹಾನಿಯ ಭೀತಿಯನ್ನುಂಟುಮಾಡುತ್ತಿದ್ದರು. ಇದೂ ಅಲ್ಲದೆ ಈಗ ಕಾಂಗ್ರೆಸ್ ಸರ್ಕಾರವಿದೆ. ನಾವೆಲ್ಲರೂ ಕಾಂಗ್ರೆಸ್ಸಿಗರು, ಇಡೀ ದೇಶವನ್ನು ಆಳುತ್ತೇವೆ. ನಮ್ಮ ವಿರುದ್ಧ ಕೆಲಸ ಮಾಡಿದವರನ್ನು ನಾವು ಬಿಡುವುದಿಲ್ಲ, ಪ್ರಾಣ ಉಳಿಯಬೇಕೆಂದರೆ ಸದರೀ ಕಾಂಗ್ರೆಸ್ ಅಧ್ಯಕ್ಷ ಹೇಳಿದಂತೆ ಕೇಳಿ, ಇಲ್ಲದಿದ್ದರೆ ನಿಮ್ಮ ಪ್ರಾಣ ಉಳಿಯುವುದಿಲ್ಲ ಎಂದು ಬೆದರಿಸುವ ಮಾತುಗಳನ್ನಾಡುತ್ತಾ ಹೊಡೆಯುತ್ತಿದ್ದರು. ನಂತರ ಅರ್ಧ ಗಂಟೆಯವರೆಗೆ ಹೊಡೆದು, ತಲೆಗಳನ್ನು ಒಡೆದು ಬಡಪಾಯಿಗಳು ಮೂರ್ಛೆ ಹೋದ ನಂತರ ಕಾಂಗ್ರೆಸ್ಸಿಗರು ಪಲಾಯನ ಮಾಡಿದರು.

ಪೋಲೀಸರು ತಟಸ್ಥರಾಗಿದ್ದರು

ಹಾವೇರಿ ತಾಲ್ಲೂಕು ಪೋಲೀಸ್ ಕಚೇರಿಯಲ್ಲಿ, ಹಿರೇಲಿಂಗದಹಳ್ಳಿಯಲ್ಲಿ ನಡೆದ ಭೀಕರ ಹಿಂಸಾ ಕೃತ್ಯವನ್ನು ಹೇಳಿದರೂ ಕೂಡಾ ಪೋಲೀಸರು ಏನೂ ಮಾಡಲಿಲ್ಲ. ಕೊನೆಗೆ ಡಿ.ಎಸ್.ಪಿ., ಐ.ಜಿ., ಗೃಹಮಂತ್ರಿ ಮುಂತಾದವರಿಗೆ ತಂತಿ ಮೂಲಕ ವಿಷಯ ತಿಳಿಸಿದ ನಂತರ ಪೋಲೀಸ್ ಪಾರ್ಟಿ ಸಾಯಂಕಾಲ ಹಾವೇರಿಯಿಂದ ಹೊರಟಿತು. ಬಹುಶಃ ಇದು ಅರಾಜಕತೆ ಎನ್ನಿಸಲಾರದು!

ಈ ಹಿಂಸಾಚಾರಿ ಕಾಂಗ್ರೆಸ್ ಅಧ್ಯಕ್ಷ ಭಾವೆಯವರ ಶಿಷ್ಯರಂತೆ!

ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರು ಒಂದು ಕಡೆ ಭೂದಾನದ ಶ್ರೀ ವಿನೋಬಾರವರ ಕೂಡೆ ಸತ್ಯ, ಅಹಿಂಸೆಯ ರಾಜಕೀಯ ತತ್ವಬೋಧೆ ಹೇಳಹೊರಟಿದ್ದಾರೆ. ಮತ್ತೊಂದು ಕಡೆ ಕೋಲು-ದೊಣ್ಣೆಗಳಿಂದ ನಿರಪರಾಧಿ ಬಡ ರೈತರನ್ನು ತಲೆ ಹೊಡೆಸುತ್ತಲಿದ್ದಾರೆ. ಇದು ಈಗಿರುವ ಕಾಂಗ್ರೆಸ್ಸಿಗರ ಮತ್ತು ಸರ್ಕಾರಿ ಅಧಿಕಾರಿಗಳ ರಾಮರಾಜ್ಯವಲ್ಲದೆ ಮತ್ತೇನು?

ನಿರಪರಾಧಿ ಪೋಲೀಸ್ ಅಧಿಕಾರಿಗಳಿದ್ದರೆ, ತಮ್ಮ ಕಾಂಗ್ರೆಸ್ ಅಧಿಕಾರದ ಮತ್ತು ದುಡ್ಡಿನ ದಬ್ಬಾಳಿಕೆಯಿಂದ ಮೇಲಧಿಕಾರಿಗಳಿಗೆ ಚಾಡಿ ಹೇಳಿ ಬೇರೆ ಕಡೆಗೆ ವರ್ಗ ಮಾಡಿಸುತ್ತಾರೆ. ಈ ಹಿಂದೆ ಎಷ್ಟೋ ಸಲ ಹೀಗೆ ಮಾಡಿದ್ದಾರೆ, ಮಾಡುತ್ತಲೂ ಇದ್ದಾರೆ.

ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರು ಕುರುಬಗೊಂಡದಲ್ಲಿ ಕಿರಾಣಿ ಅಂಗಡಿ, ಜೀನು, ಬಟ್ಟೆ ಅಂಗಡಿ, ಹತ್ತಿ ಮೆಣಸಿನಕಾಯಿಗಳ ಒಟ್ಟು ವ್ಯಾಪಾರ ಮಾಡುತ್ತಾರೆ. ಪ್ರತಿಯೊಂದು ರೀತಿಯಿಂದಲೂ ಹಾವೇರಿ ತಾಲ್ಲೂಕು ದಕ್ಷಿಣ ಭಾಗದ ಹಳ್ಳಿಯ ರೈತ ಕೂಲಿಗಾರರ ರಕ್ತ ಚೆನ್ನಾಗಿ ಹೀರುತ್ತಾರೆ. ಲಾಭದ ತೆರಿಗೆ, ಮಾರಾಟದ ತೆರಿಗೆ ಮುಂತಾದ ಸರಕಾರದ ಉತ್ಪನ್ನವನ್ನು ತಪ್ಪಿಸಲು ಬೇರೆ ಬೇರೆ ಜನರ ಹೆಸರಿನಿಂದ ಬ್ಯಾಡಗಿ, ಹಾವೇರಿ ದಲ್ಲಾಳಿಗಳಲ್ಲಿ ಮಾಲನ್ನು ಬಿಕರಿ ಮಾಡುತ್ತಲಿದ್ದಾರೆ.

ರೈತರ ಮೇಲಿನ ಧಾಳಿಯ ಹಿನ್ನೆಲೆ

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾವೇರಿ, ಕನಕಾಪುರ, ಕೋಡಿಹಳ್ಳಿ, ಕಲ್ಲಾಪುರ, ಹಿರೇಲಿಂಗದಹಳ್ಳಿ, ಬನ್ನಿಹಳ್ಳಿ, ಕಾಗಿನೆಲ್ಲಿ, ಇಂಗಳಗೊಂದಿ, ನೆಲ್ಲಿಕೊಪ್ಪ, ಮುತ್ತೂರು, ನಿಂಗಾಪುರದ ಮೇಲಿನಿಂದ ಹಾಯ್ದು ಲಿಂಗಾಪುರದ ಹತ್ತಿರ ಬ್ಯಾಡಗಿ ಹಿರೇಕೇರೂರ ಪಕ್ಕಾ ರಸ್ತೆಗೆ ಕೂಡಿಸುವ ಯೋಜನೆಯು ಮಂಜೂರಾಗಿದ್ದು, ಮೇಲೆ ಹೇಳಿದ ಹಳ್ಳಿಗಳ ಮೇಲೆ ಹಾದು ಬನ್ನಿ ಹಳ್ಳಿಯವರೆಗೆ ಅಂದರೆ 6 ಮೈಲಿ 2 ಫರ್ಲಾಂಗು ಮೆ|| ಡಿ. ಎಲ್. ಬಿ. ಓವರ್‌ಸೀಯರು. ಮೊದಲಿನ ಮುಂಬೈ ಸರಕಾರದ ಹುಕುಂನ ಪ್ರಕಾರ ಅಳತೆ ಮಾಡಿದ್ದರು. ಮತ್ತು ಮುಂದೆ ಅಳತೆ ಮಾಡುವುದನ್ನು ಏಕಾಏಕಿ ನಿಲ್ಲಿಸಿದ್ದಕ್ಕೆ, ಮೇಲೆ ಹೇಳಿದಂತೆ ಧಾಳಿಗೀಡಾದ ಈ ಬಡ ರೈತ ಕೂಲಿಗಾರರು ಮತ್ತು ಉಳಿದ ಹಳ್ಳಿಗರು ರಸ್ತೆ ಅಳತೆ ಮಾಡುವುದು ನಿಲ್ಲಿಸಿದ ಕಾರಣ ಕೇಳಿ ಮತ್ತು ಮೊದಲು ಮಾಡಿದ ಯೋಜನೆಯ ಪ್ರಕಾರವೇ ರಸ್ತೆಯನ್ನು ಮಾಡಿಸುವುದಕ್ಕಾಗಿ ಸರ್ಕಾರದ ಮೇಲಧಿಕಾರಿಗಳಿಗೆ ಅರ್ಜಿ ವಗೈರೆ ಮಾಡಿಕೊಂಡಿದ್ದರು. ಈ ಸೇಡು ತೀರಿಸಿಕೊಳ್ಳುವುದಕ್ಕಾಗಿ ಮತ್ತು ತಾಲ್ಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ಊರಾದ ಕುರುಬಗೊಂಡದ ಮೇಲೆಯೇ ರಸ್ತೆ ಮಾಡಿಸುವುದಕ್ಕೆ ಬಲಾತ್ಕಾರವಾಗಿ ಒಪ್ಪಿಗೆ ಪಡೆಯುವ ಉದ್ದೇಶದಿಂದ ಇಂಥ ಹೀನ ಕೃತಿಗಳಿದಿದ್ದು. ತಮ್ಮ ಕೈಕೆಳಗಿನ ಪುಢಾರಿಗಳಿಂದ ರೈತರನ್ನು ಥಳಿಸಿದ್ದಾರೆ.

ಇದೇ ರೀತಿ ಅನ್ಯಾಯ, ಅತ್ಯಾಚಾರಗಳನ್ನು ಮುಂದುವರಿಸಿ, ಸಂಘಟನೆ ಹೊಂದುತ್ತಿರುವ ರೈತರನ್ನು ಸದೆಬಡಿಯಲು ಸಾಧ್ಯವಿಲ್ಲವೆಂದು ಕಾಂಗ್ರೆಸ್ಸಿಗರು ಇನ್ನಾದರೂ ತಿಳಿಯುವುದು ಉತ್ತಮ. ಮೈಸೂರಿನಲ್ಲಿ ಈಗೀಗ ಅರಾಜಕತೆ ಮಿತಿಮೀರಿದೆ ಎಂಬುದಕ್ಕೆ ಕಾಂಗ್ರೆಸ್ ಆಳ್ವಿಕೆಯಲ್ಲಿ ಬಡಜನರ-ರೈತಕಾರ್ಮಿಕರ ಮೇಲೆ ದಬ್ಬಾಳಿಕೆ ನಿರಾತಂಕವಾಗಿ, ಬಹುಶಃ ಕಾಂಗ್ರೆಸ್ ಸರ್ಕಾರದ್ದೆ ಒಪ್ಪಿಗೆಯಾಗಿಯೋ ಏನೋ, ನಡೆಯುತ್ತಿದೆ ಎಂಬುದಕ್ಕೆ ಇದು ಒಂದು ನಿದರ್ಶನವಾಗಿದೆ. ನಮ್ಮ ಪೋಲೀಸು ಸಚಿವರು ಈ ಬಗ್ಗೆ ನೇರವಾದ ಕ್ರಮ ಕೈಗೊಳ್ಳುವರೇ? ಪ್ರಾಂತದ ಕಾಂಗ್ರೆಸ್ ಅಧ್ಯಕ್ಷರು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರ ಈ ಹಿಂಸಾಚಾರ ಜನಮರ್ದಕ ವರ್ತನೆಯ ಬಗ್ಗೆ ವಿಚಾರಿಸುವರೆ?

ರೈತರಂಗ

ರೈತಸಂಘದ ಸ್ಥಾಪನೆ

ಬೆಂಗಳೂರು ಯಲಹಂಕ ಹೋಬಳಿ ವಡೇರ ಹಳ್ಳಿಯಲ್ಲಿ 18—12—57 ರಂದು ಸಭೆ ನಡೆದು ರೈತ ಸಂಘವನ್ನು ಸ್ಥಾಪಿಸಲಾಯಿತು. ಶ್ರೀ ಮುನಿಶಾಮಪ್ಪ ವಿ. ಪಿ. ಛೇರ್‌ಮನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಿವರುದ್ರಪ್ಪ ಮತ್ತು ಬಿ. ಟಿ. ವಿ. ರಾಜುರವರು ರೈತ ಸಂಘದ ಅಗತ್ಯತೆಯ ಬಗ್ಗೆ ಮತ್ತು ಕೇರಳ ಸರಕಾರದ ಭೂಶಾಸನದ ಬಗ್ಗೆ ಮಾತನಾಡಿದರು. ಶ್ರೀ ವೋಟಪ್ಪ ಇವರನ್ನು ರೈತಸಂಘದ ಅಧ್ಯಕ್ಷರಾಗಿಯೂ ಶ್ರೀ ಮುನಿಯಪ್ಪ ಇವರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು.

ರೈತರ ಸಭೆಗಳು

ಫ್ರೇಜರ್‌ಪೇಟೆ

ಫ್ರೇಜರ್ ಪೇಟೆಯ ರೈತ ಸಂಘದ ಆಫೀಸಿನಲ್ಲಿ ತಾರೀಕು 10—12—57ರಲ್ಲಿ ರೈತ ಸಂಘದ ವಿಸ್ತೃತ ಸಭೆಯು ಜಿಲ್ಲಾ ಕಾರ್ಯದರ್ಶಿ ವೈ. ಟಿ. ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಫ್ರೇಜರ್ ಪೇಟೆ ನಾಡಿನ ಗ್ರಾಮಗಳಿಂದ ಪ್ರತಿಗ್ರಾಮಕ್ಕೆ ಐದು ಜನರಂತೆ ರೈತರು ಸಭೆಗೆ ಬಂದಿದ್ದರು. ಇಲ್ಲಿಯ ವರೆಗೆ ಸಂಘವು ರೈತರ ಸಮಸ್ಯೆಗಳನ್ನು ಪರಿಹರಿಸಲು ನಡೆಸಿದ ಮತ್ತು ನಡೆಸಬೇಕಿರುವ ವಿಷಯಗಳ ಮೇಲೆ ಹೋಬಳಿ ಕಾರ್ಯದರ್ಶಿ ಶ್ರೀ ಕೆ. ಯಂ. ಪೊನ್ನಪ್ಪನವರು ವಿವರಿಸಿ ಮಾತಾಡಿದರು. ಅನಂತರ ಕಾರ್ಯಕ್ರಮ ಪಟ್ಟಿಯಂತೆ ಈ ಹೋಬಳಿಗೆ ಹನ್ನೊಂದು ಜನರಿಂದ ಕೂಡಿದ ಸಮಿತಿಯನ್ನು ಚುನಾಯಿಸಿ, ಹೋಬಳಿ ರೈತ ಸಂಘಕ್ಕೆ ಅಧ್ಯಕ್ಷರಾಗಿ ತೊತ್ತೇರ ಪೊನ್ನಪ್ಪನವರನ್ನೂ, ಕಾರ್ಯದರ್ಶಿಯಾಗಿ ಕೆ. ಯಂ. ಪೊನ್ನಪ್ಪನವರನ್ನೂ, ಉಪಕಾರ್ಯದರ್ಶಿಯಾಗಿ ಯಸ್. ಗಿರುಮಾಜಿರಾವ್‌ರವರನ್ನೂ, ಕಜಾಂಚಿಯಾಗಿ ಸುಬ್ಬಣ್ಣನವರನ್ನೂ ಚುನಾಯಿಸಲಾಯ್ತು.

ಕೊಡಗು ಜಿಲ್ಲಾ ರೈತಸಂಘದ ಸಮ್ಮೇಳನವನ್ನು 58ನೇ ಫೆಬ್ರವರಿ ತಿಂಗಳ ಕಡೇ ವಾರದಲ್ಲಿ ಜರಗಿಸಬೇಕೆಂದೂ, ಮತ್ತು ಸಮ್ಮೇಳನವು ಫ್ರೇಜರ್ ಪೇಟೆಯಲ್ಲಿಯೇ ನಡೆಯಬೇಕೆಂದೂ ಅಭಿಪ್ರಾಯ ಪಡಲಾಯ್ತು. ಕೊಡಗು ಜಿಲ್ಲಾ ಕಡಮಕಲ್ಲು ರಬ್ಬರ್ ತೋಟದ ಐವತ್ತು ಜನ ಮಜೂರರನ್ನು ಮೇನೇಜುಮೆಂಟು ಡಿಸ್‌ಮಿಸ್ ಮಾಡಿದ್ದಕ್ಕೆ ಮೇನೇಜುಮೆಂಟನ್ನು ಖಂಡಿಸುವ, ಕೆಲಸವಿಲ್ಲದೆ ಹಸಿದುಕೊಂಡಿರುವ ಮಜೂರರಿಗೆ ಧನಸಹಾಯ ಮಾಡಲು ಸಂಘದ ಎಲ್ಲಾ ಸದಸ್ಯರೂ ಭಾಗಿಗಳಾಗಬೇಕೆಂದು ತೀರ್ಮಾನಿಸಲಾಯಿತು. ಅನಂತರ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾಯ್ತು.

○ ರೈತರಿಗೆ ಭೂಮಾಲಿಕರಿಂದ ನಡೆದ ಅನ್ಯಾಯಗಳ ಸಂಬಂದದಲ್ಲಿ ತಾಲೋಕು ಸುಬೇದಾರರಿಗೆ ಪುಕಾರು ಕೊಟ್ಟರೆ ವಿಚಾರಿಸಲು ಸುಬೇದಾರರು ಉದಾಸೀನತೆಯನ್ನು ತೋರುವ ವಿಶಯಕ್ಕೆ ಸಭೆಯು ವಿಷಾದಿಸುತ್ತದೆ.

○ ವಾರಗಾರರು ಬೆಳೆದ ಪಸಲನ್ನು ದಬ್ಬಾಳಿಕೆಯಿಂದ ವಶಪಡಿಸಿಕೊಂಡ ಭೂಮಾಲಿಕರ ಕೃತ್ಯವನ್ನು ಈ ಸಭೆಯು ಖಂಡಿಸುತ್ತದೆ.

○ ವಾರಗಾರ ರೈತರಿಗೆ ಸಹಕಾರಿ ಬ್ಯಾಂಕುಗಳಿಂದ ಅಲ್ಪಾವಧಿ ಸಾಲಗಳನ್ನು ಒದಗಿಸಬೇಕು.

ಅಧ್ಯಕ್ಷರ ಭಾಷಣದ ನಂತರ ವಂದನಾರ್ಪಣೆಯಿಂದ ಸಭೆ ಬರಕಾಸ್ತು ಆಯ್ತು.

ಮಂಗಳೂರು ತಾಲೂಕು

ಮುನ್ನೂರು

ಮಂಗಳೂರು ತಾಲೂಕು ಮುನ್ನೂರು ಗ್ರಾಮದ ರೈತರ ಸಭೆಯು ತಾ 10-12-57'ರಂದು ಕುತ್ತೂರ ಪದವಿನಲ್ಲಿ ಶ್ರೀ ಬಿ. ಕೊರಗಪ್ಪ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ನಾರಾಯಣ ನ್ಯಾಕರು ರೈತರ ಚಟುವಟಿಕೆಗಳ ವರದಿಯನ್ನಿತ್ತರು. ಜಿಲ್ಲಾ ರೈತ ಸಮಿತಿಯ ನಿರ್ಣಯ, ಕರ್ನಾಟಕ ಪ್ರಾಂತ ರೈತ ಸಮ್ಮೇಲನವು ಅಂಗೀಕರಿಸಿದ ಠರಾವುಗಳ ಕುರಿತು ಸಭೆಯಲ್ಲಿ ಮಾತಾಡಿದ ಬಳಿಕ 13 ಮಂದಿ ಸದಸ್ಯರುಳ್ಳ ರೈತ ಸಮಿತಿಯೊಂದನ್ನು ರಚಿಸಲಾಯಿತು.

ತೊಕ್ಕೊಟು

ತಾ. 12—12—57ರಂದು ಉಳ್ಳಾಲ ತೊಕ್ಕೊಟ್ಟಿನಲ್ಲಿ ಕೋಟೆಕಾರ್ ಸರ್ಕಲ್ ರೈತ ಸಮಿತಿಯ ಸಭೆಯು ಶ್ರೀ ಎಂ. ಎಚ್. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಬಿ. ಕೊರಗಪ್ಪ ರೈಯವರು ಸರ್ಕಲಿನಲ್ಲಿ ನಡೆಯುತ್ತಿರುವ ರೈತರ ಚಟುವಟಿಕೆಗಳ ವರದಿಯನ್ನಿತ್ತರು. ಅಧ್ಯಕ್ಷರು ರೈತರ ಸಂಘಟನೆ, ಗೇಣಿ ನಿರ್ಣಯ ಕೋರ್ಟುಗಳ ಕಾರ್ಯಕಲಾಪ; ಕ. ಪ್ರಾ. ರೈತ ಸಮ್ಮೇಲನದ ತೀರ್ಮಾನ ಇವುಗಳ ಬಗ್ಗೆ ಸುಧೀರ್ಘ ಭಾಷಣವಿತ್ತರು. ಮುಂದಿನ ವರ್ಷಕ್ಕೆ ಶ್ರೀಗಳಾದ ಚನ್ನಪ್ಪ ನ್ಯಾಕರು ಅಧ್ಯಕ್ಷರಾಗಿಯೂ, ಶ್ರೀ ಬಿ. ಕೊರಗಪ್ಪ ರೈ ಕಾರ್ಯದರ್ಶಿಯಾಗಿಯೂ ಸಂಕಪ್ಪ ಆಳ್ವ ಮತ್ತು ಕೃಷ್ಣಪ್ಪನವರು ಜೊತೆ...

(೬ನೇ ಪುಟ ನೋಡಿ)

ತಿರುಗುಬಾಣ

"ಹಳ್ಳಿಗಳ ಅಭಿವೃದ್ಧಿಗೆ ದುಡಿಮೆ ಅಗತ್ಯ. ಸುಶಿಕ್ಷಿತರು ಹಳ್ಳಿಗರ ನಡುವೆ ನೆಲೆಸಿದರೆ . . . ಮಾತ್ರ ಅಭಿವೃದ್ಧಿಯಾದೀತು" ಎಂದು ಶಾಂತಿನಿಕೇತನದಿಂದ ನೆಹ್ರೂವಾಣಿ ಕೇಳಿದೆ.

"ವ್ಯವಸಾಯದತ್ತ ವಿದ್ಯಾವಂತರ ಆಸಕ್ತಿ ಹರಿಯಬೇಕು" ಎಂದು ಶ್ರೀ ನೆಹ್ರೂರವರ ಹೆಜ್ಜೆಯಲ್ಲೇ ಮೈಸೂರು ರಾಜ್ಯದ ವ್ಯವಸಾಯ ಸಚಿವ ಶ್ರೀ ಹೆಚ್. ಎಸ್. ರುದ್ರಪ್ಪನವರು ಪ್ರತಿವಾಣಿಯೊಂದನ್ನು ಹೊರಡಿಸಿದ್ದಾರೆ

ನಮ್ಮ ಹಳ್ಳಿಯವರು ಸೋಮಾರಿಗಳಲ್ಲ. ಆದರೆ ದುಡಿಯಲು ಸುಮಾರು 15 ಕೋಟಿ ಎಕರೆಯಷ್ಟು ಭೂಮಿ ಸರಕಾರ ಮತ್ತು ಭೂಮಾಲಿಕರ ಕೈಯಲ್ಲಿ ಇದ್ದರೂ, ಭೂಹೀನರಾಗಿ ಕೆಲಸವಿಲ್ಲದೆ 3½ ಕೋಟಿ ರೈತ ಕೂಲಿಗಾರರಿದ್ದಾರೆಂಬುದನ್ನು ಈ ಸಚಿವ ಮಾನ್ಯರ ನೆನಪಿಗೆ ತರಬಹುದೇ?

o o o o

ಈ 3½ ಕೋಟಿಗೆ ಇನ್ನಷ್ಟು ಕೋಟಿ ನಿರುದ್ಯೋಗಿಗಳನ್ನು ಸೇರಿಸಿಕೊಂಡು ಹಳ್ಳಿಗರ ಅರೆ ಹೊಟ್ಟೆಗೆ ಬರೆ ಹಾಕಲು ತಾವು ಸಿದ್ಧರಿಲ್ಲ. ಇನ್ನು ಮುಂದೆ ನೆಹ್ರು ಇಂಥಾ ಅಭಾಸ ನುಡಿದರೆ, ನಿರುದ್ಯೋಗಿಗಳೂ ಮುಷ್ಕರ ಹೂಡುವುದು ಖಂಡಿತವೆಂದು ವದಂತಿ.

[ಈ ವದಂತಿ ನಿಜವಾದಲ್ಲಿ, ಮುಷ್ಕರ (ಮುರಿಯುವಂತೆ) ಸಂಧಾನದಲ್ಲಿ ಈಗಾಗಲೇ ಚತುರರಾದ ಶ್ರೀ ಕೇಶವ ಎಂ. ಪಿ. (ಹೆಚ್.ಎ.ಎಲ್ ಖ್ಯಾತಿ) ಮೈಸೂರಿನ ಹೆಸರಾಂತ ಕಾರ್ಮಿಕ (ದ್ರೋಹಿ) ಮಂತ್ರಿ ಶ್ರೀ ವೈಕುಂಠ ಬಾಳಿಗಾ ಮತ್ತು ವಿದ್ಯುಚ್ಛಕ್ತಿ ಬೋರ್ಡ್ ನೌಕರರಿಗೆ ಮುಷ್ಕರ ಮಾಡಬೇಡಿ ಎಂದು ಮೊನ್ನೆ ಮೊನ್ನೆ ಬುದ್ಧಿವಾದವಿತ್ತು ಈ ಕ್ಷೇತ್ರದಲ್ಲಿ ಹೊಸ ಅನುಭವ ಗಳಿಸಿದ ವೀರಣ್ಣಗೌಡರು ಇವರುಗಳನ್ನು ಒಳಗೊಂಡ ಸಂಧಾನ ಸಮಿತಿ ರಚಿಸಬಹುದೆಂದು ನಮ್ಮ ಸೂಚನೆ]

o o o o

ಮತ್ತೂ ನಿರುದ್ಯೋಗಿಗಳು ಒಪ್ಪದಿದ್ದರೆ, ಕಾಂಗ್ರೆಸ್ ಸೇವಾದಳ ಕೇರಳದಲ್ಲಿನ 'ಕ್ರಿಸ್ಟೋಫರ್' (ಗೂಂಡಾ)ದಳ ಮತ್ತು ಕಾಶ್ಮೀರದಲ್ಲಿ ಜನರನ್ನು ಬೆದರಿಸಿ ಸುಲಿಯುವ ಪ್ರಧಾನಿ ಭಕ್ಷಿಯವರ 'ಶಾಂತಿದಳ'ಗಳಿಗೆ ಇವರನ್ನು ಭರ್ತಿ ಮಾಡಿಕೊಳ್ಳಬಹುದೆಂದೂ ಇನ್ನೊಂದು ಸಲಹೆ.

ಕೊನೆಯದಾಗಿ ಈ 'ದಳ'ಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಶ್ರೀಮನ್ನಾರಾಯಣ, ಎಸ್. ಕೆ. ಪಾಟೀಲ್ ಮತ್ತು ಪಿ.ಎಸ್.ಪಿ.ಯ ಥಾನುಪಿಳ್ಳೆಯವರನ್ನು ಕಾಣಬಹುದೆಂದೂ ಸೂಚಿಸುತ್ತೇವೆ.

o o o o

ಜನರು ಯಾವುದೇ ಪಕ್ಷ ಪಂಗಡವನ್ನೂ ಸೇರುವ ಹಕ್ಕು-ಸ್ವಾತಂತ್ರ್ಯವನ್ನು ನಮ್ಮ ಘಟನೆಯಲ್ಲೀಯಲಾಗಿದೆ

ಆದರೆ ಇದೀಗ ಬೆಂಗಳೂರಿನಲ್ಲಿ ಸೇರಿದ ರೋಮನ್ ಕೆಥೊಲಿಕ್ ಬಿಷಪರ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯದಲ್ಲಿ ಕೆಥೊಲಿಕರು ಕಮ್ಯೂನಿಸ್ಟ್ ಪಾರ್ಟಿ ಸೇರಿದರೆ ಅವರನ್ನು ಮತದಿಂದ ಹೊರಹಾಕಲಾಗುವುದೆಂಬ ಬೆದರಿಕೆ ಕೊಡಲಾಗಿದೆ.

ಮದ್ರಾಸಿನಲ್ಲಿ ರಾಮಸ್ವಾಮಿನಾಯ್ಕರ ಗುಂಪು ಘಟನೆಯ ಪುಸ್ತಕವನ್ನು ಸುಡಲು ಹೊರಟಿದೆ. ಇತ್ತ ಬೆಂಗಳೂರಿನಲ್ಲಿ ಕೆಥೊಲಿಕ್ ಬಿಷಪ್‌ರು ಬಹಿರಂಗವಾಗಿ ಘಟನೆಯನ್ನು ಉಲ್ಲಂಘಿಸಿ ಹೆಚ್ಚು ಕಮ್ಮಿ ಅದೇ ರೀತಿಯಲ್ಲಿ ವರ್ತಿಸಿದ್ದಾರೆ.

ಇಂಥವರಿಗಾಗಿ ಪ್ರತಿಬಂಧಕಾಜ್ಞೆ ಬೇಕೇ ಬೇಕು ಎಂದು ವಾದಿಸಿದ ಪಂತರಿಗೆ, ಈ ಘಟನೆಗೆ ಅಪಮಾನಕಾರಿ ನಿರ್ಣಯದ ಬಿಸಿ ತಟ್ಟಿಲ್ಲವೆಂದು ಕಾಣುತ್ತೆ! ತಟ್ಟಿದ್ದರೂ ಕಾಂಗ್ರೆಸ್ಸಿಗೆ ಸಿಗುವ ಕೆಥೊಲಿಕರ ಮತವನ್ನು ಕಳೆದುಕೊಳ್ಳುವ ಇಚ್ಛೆ. ಈ ಘಟನಾ ವಿರೋಧಿಗಳನ್ನು ಶಿಕ್ಷಿಸುವ ಕರ್ತವ್ಯಕ್ಕಿಂತಲೂ ಮೇಲಾದುದೆಂದು ಪಂತರು ನಂಬಿರಬಹುದು! ಅಲ್ಲದೆ ಪ್ರತಿಬಂಧಕಾಜ್ಞೆ ಇರುವುದು ಕಮ್ಯೂನಿಸ್ಟರಿಗಾಗಿ ಹೊರತು ಕಮ್ಯೂನಿಸ್ಟ್ ವಿರೋಧಿಗಳಿಗಾಗಿ ಅಲ್ಲವಲ್ಲ!

o o o o

'ದೈವಾನುಗ್ರಹದಿಂದ (ಜನಾನುಗ್ರಹದಿಂದಲ್ಲ-ಸೂ. ದ.) ನೀವೂ ನಾನೂ ಮುಂದಿನ ಬಜೆಟ್ ಅಧಿವೇಶನದಲ್ಲಿದ್ದರೆ ನನ್ನ ತಲೆಯ ಮೇಲೆ ಅನೇಕ ಕಲ್ಲುಗಳನ್ನೆಸೆಯಲು ನಿಮಗೆ ಅವಕಾಶ ದೊರೆಯುತ್ತದೆ. ಅವನ್ನು ಸಹಿಸಲು ನನಗೆ ಗಟ್ಟಿ ತಲೆಬುರುಡೆ ಇದೆ' ಎಂದು ಟಿ.ಟಿ.ಕೆ.ಯವರು ಡಾ|| ಭೂಪೇಶ್ ಗುಪ್ತಾರವರಿಗೆ ರಾಜ್ಯಸಭಾಧಿವೇಶನದಲ್ಲಿ ತಿಳಿಸಿದ್ದಾರೆ.

ಅಂತೂ ಟಿ. ಟಿ. ಕೆ. ಯವರು ತನಗೆ ಮುಂದೆ ಕಲ್ಲು ಬೀಳುವುದು ಖಂಡಿತವೆಂದು ಮನಗಂಡಿದ್ದಾರಲ್ಲಾ! ಇದು ನಿಜವಾಗಿಯೂ **"ಬೋಳು ಬುರುಡೆ ಮಾತಲ್ಲ"** ಗಟ್ಟಿ ತಲೆ ಬುರುಡೆ ಮಾತೇ ಸರಿ!

o o o o

ಕಾರ್ಪೊರೇಷನ್ ಚುನಾವಣೆಗಳಲ್ಲಿ ಶೇ. 50ರಷ್ಟು ಮತದಾರರು ಮಾತ್ರ ಮತದಾನ ಮಾಡಿದ್ದಾರೆಂದು ನಿರುತ್ಸಾಹ ಸೂಚಕ ವರದಿಯಾಗಿದೆ.

ಹಾಗಾದರೆ ನಾವು ಗೆಲ್ಲುವುದು ಖಂಡಿತವೆಂದು ಕಾಂಗ್ರೆಸ್ ಆಫೀಸಿನಿಂದ ಉತ್ಸಾಹಪೂರಿತ ಕೇಕೆ ಕೇಳಿ ಬಂದಿದೆಯಂತೆ.

ಅಂತೂ ಅತ್ಯಲ್ಪ ಬಹುಮತ ಪಡೆದು ಕಾಂಗ್ರೆಸ್ ಗೆದ್ದಿದೆ. ಗೆದ್ದ ಉಮೇದುವಾರರಲ್ಲಿ ಕೆಲವರು ಈ ಸಾರಿ ಮೇಯರ್ ಗಿರಿಗೆ ಮಾರ್ಕೆಟ್ ದರ ಎಷ್ಟು ಸಹಸ್ರ ವಿರಬಹುದು ಎಂದು ಈಗಾಗಲೇ ಲೆಖ್ಖ ಹಾಕುತ್ತಿದ್ದಾರಂತೆ.

ಸಹಸ್ರಾರು ರೂಪಾಯಿ ಖರ್ಚು ಮಾಡಿದ ಕೆಲವು ಕಾಂಗ್ರೆಸ್ ಉಮೇದುವಾರರು ಈ ಮೇಯರ್‌ಗಿರಿ ಕಾದಾಟದಲ್ಲಿ ನಮ್ಮ ಹಣ ಸಂದಾಯ ಖಂಡಿತವೆಂದು ಹೇಳುತ್ತಿದ್ದಾರಂತೆ.

-ಸೂಕ್ಷ್ಮದರ್ಶಿ

ಓದುಗರ ಓಲೆ

ಟೌನ್ ಪ್ರೆಸಿಡೆಂಟ್‌ಗಿರಿಗಾಗಿ ಕಾದಾಟಗಳು

ಕೋಲಾರ ಟೌನ್ ಮುನಿಸಿಪಲ್ ಪ್ರೆಸಿಡೆಂಟರಾಗ ಬೇಕೆಂಬುದೇ ಜೀವನದ ಮಹದಾಕಾಂಕ್ಷೆಯುಳ್ಳ ಅನೇಕ ಮಹನೀಯರುಗಳು ಇರುವರು. ಇವರಲ್ಲಿ ಅನೇಕರು ಕೌನ್ಸಿಲರುಗಳಾಗದೆಯೇ ಹೋದದ್ದೂ ಆಯಿತು. ಕೆಲವರು ಅದೇ ಕಾರಣವಾಗಿ ಕಾಂಗ್ರೆಸ್ ಅನ್ನಿಸಿಕೊಂಡು ತಕ್ಷಣ ಭಕ್ತಿ ತೋರಿಸಿದ್ದೂ ಆಯಿತು. ಹೀಗೆಲ್ಲಾ ಆಗಿ ಕೊನೆಗೆ ಇವರ್‍ಯಾರಿಗೂ ಆ ಪದವಿ ದಕ್ಕದೆ ಕೌನ್ಸಿಲಿನಲ್ಲಿ ಒಹು ಸಂಖ್ಯಾತರಾದ ಮುಸಲ್ಮಾನರಿಗೆ ಕೊಡುವ ಹಾಗೆ ಕೋಲಾರ ಕಾಂಗ್ರೆಸ್ ಕಮಿಟಿಯು ಬಹು ಚಾಣಕ್ಯ ತಂತ್ರದಿಂದ ತೀರ್ಮಾನಿಸಿತು. ಆದರೆ ಇದರಿಂದ ಜಾತೀಯ ಐಕ್ಯತೆ ಏರುವುದನ್ನು ಅರಿತು ಆ ಪದವಿ ಅವಧಿಯನ್ನು ವಿಭಜಿಸಿ ಹಿಂದುಗಳಿಗೆ ಉಳಿದರ್ಧಕ್ಕೆ ಪಟ್ಟಕಟ್ಟುವಂತೆ ಒಪ್ಪಂದವಾಯಿತು. ಈಗ ಮೊದಲರ್ಧದ ಸಮಯ ತೀರುವುದರಲ್ಲಿದೆ, ಇನ್ನರ್ಧದ ಹುರಿಯಾಳುಗಳು ಎದ್ದು ನಿಂತಿರುವರು. ನಡೆಯುತ್ತಿರುವುದು ಬಹು ಸಂಖ್ಯಾತರ ಆಡಳಿತ. ಅವರನ್ನು ಬಿಡಿಸಲಿಕ್ಕೆ ಸಾಧ್ಯವಿಲ್ಲದೆ ಅಲ್ಪ ಸಂಖ್ಯಾತರನ್ನು ಬಿಡಲಾರದೆ ನೀರಾಚೆಯ ಮೀನಿನಂತೆ ಒದ್ದಾಡುತ್ತಿದೆ ಕೋಲಾರದ ಕಾಂಗ್ರೆಸ್ಸು. ಪದವೀ ಆಸೆಯ ಮೋಸದ ಬಲೆಬೀಸಿ ಸಮಯದಲ್ಲಿ ಕಾರ್ಯಸಾಧಿಸಿದ್ದಾಯಿತು ಈಗ ಇಬ್ಬಂದಿಯಲ್ಲಿ ಸಿಕ್ಕಿ ಪರೆದಾಡುತ್ತಿದ್ದಾರೆ ಕಾಂಗ್ರೆಸ್ ಮುಖಂಡರುಗಳು.

ಈ ಒಳಗುದಿ ಯುದ್ಧದಲ್ಲಿ ನಗರದ ನಾಗರಿಕರಿಗೆ ಅನಾನುಕೂಲ ಹೆಚ್ಚುತ್ತಿದೆ ಆಡಳಿತ ವರ್ಗವು ಗಮನ ಕಡಿಮೆ ಮಾಡಲು ಇದು ಕಾರಣವಾಗಿದೆ. ಬಡವರಿಗೆ ಕೊಡುತ್ತಿದ್ದ ಹಾಲುಪುಡಿ ನಿಂತಿತು. ಡಿ. ಡಿ. ಟಿ.ಯ ಸಾರ ಕ್ರಮೇಣ ಕುಂದಿತು. ಆಫೀಸಿನಲ್ಲಿರುವ ನೌಕರರ ಯಥೇಚ್ಛೆಯು ಅಧಿಕವಾಗಿ ನಾಗರಿಕರಿಗೆ ತುಂಬಾ ತೊಂದರೆಯಾಗಿದೆ. ಅಧಿಕಾರಕ್ಕಾಗಿ ಹಾತೊರೆಯುತ್ತಿರುವ ಮತ್ತೊಂದು ವರ್ಗವು 'ಏನು ಸ್ವಾಮಿ ಆ ಹೊತ್ತಿನ ನಿರ್ಧಾರವೇ ನಾಯಿತು' ಎನ್ನುವುದನ್ನು ಬೀದಿಗಳಲ್ಲಿ ಬೇಕಾದರೆ ಕೇಳಬಹುದು. ಅಷ್ಟು ಕೀಳು ದರ್ಜೆಗೆ ಇಳಿದಿದೆ ಇಲ್ಲಿನ ಕಾಂಗ್ರೆಸು. ಒಂದು ವೇಳೆ ಇವರಿಗೆ ಆ ಪಟ್ಟಸಿಕ್ಕದಿದ್ದಲ್ಲಿ ನಾವು ಕಾಂಗ್ರೆಸ್ಸೇ ಅಲ್ಲವೆಂತ ಕೂಡ ಅನ್ನುವ ಪರಿಸ್ಥಿತಿ ಕೂಡ ಬಂದೊದಗಬಹುದು. ಪಾಪ ಈ ದುರ್ಗತಿ ಕಾಂಗ್ರೆಸ್ಸಿಗೆ ಬಂದೊದಗಿರುವುದು ಬಲು ಶೋಚನೀಯವಾಗಿದೆ.

ಹೋಟೆಲುಗಳ ನೈರ್ಮಲ್ಯ ತೀರ ಕೆಟ್ಟಿದೆ

ಕೋಲಾರ ನಗರದಲ್ಲಿ ಸುಮಾರು ಮೂವತ್ತು ಹೋಟೆಲುಗಳ ಪೈಕಿ ಒಂದು ಸಹ ಶುದ್ಧವಾಗಿಲ್ಲ. ಎಲ್ಲ ಹೋಟೆಲುಗಳಲ್ಲೂ ಕೊಳಕು ತುಂಬಿ ತೇಲುತ್ತಿದೆ. ತಿಂಡಿಗಳಲ್ಲಂತೂ ಸೇವಿಸದಿರುವಂತಹ ತರಕಾರಿ ಕೂಡಾ ಖಂಡಿತವಾಗಿ ಸೇರಿರುತ್ತದೆ. ಸೋಸಿ ಬಂದ ನೀರು ಗ್ಲಾಸು ಸೇರುತ್ತಲೇ ತೇಲುತ್ತಿರುವ ಕಲ್ಮಷಗಳು ಯಥೇಚ್ಛವಾಗಿ ಕಂಡು ಬರುತ್ತವೆ. ಆದರೇನು ಮಾಡುವುದು? ಇರುವುದೆಲ್ಲಾ ಹೋಟೆಲುಗಳಲ್ಲಿ ಹಾಗೆಯೇ ಇರುವುದರಿದ "ಅದೇ ತಿಂತೀನಿ ಕದಾ ತೆರಿ" ಅನ್ನುವ ಹಾಗೆ ಕೋರ್ಟು ಕಛೇರಿಗಳಿಗೆ ಬಂದಿರುವ ಜನರು ಅದನ್ನೇ ಸೇವಿಸಬೇಕಾಗಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಅತಿ ಜಾಗ್ರತೆ ಬರುವುದರಲ್ಲಿ ಸಂದೇಹವಿಲ್ಲ. ಇದೆಲ್ಲಾ ನೋಡಿ, ತಾವು ಸೇವಿಸಿ ಕೂಡಾ, ಆರೋಗ್ಯದ ಇಲಾಖೆಯವರು ಇನ್ನೂ ಕ್ರಮ ಕೈಕೊಳ್ಳದೆ ಇರುವುದು ಗಮನಾರ್ಹವಾಗಿದೆ. ಟೌನ್ ಮುನಿಸಿಪಾಲಿಟಿಯಂತೂ ಹೋಟೆಲುಗಳ ವಿಚಾರದಲ್ಲಿ ತಲೆ ಹಾಕುವುದಿಲ್ಲವೆಂದು ಮಾಲಿಕರಿಗೆ ಕೈ ಭಾಷೆ ಕೊಟ್ಟಂತಿದೆ. ಹೋಗಲಿ ಆರೋಗ್ಯದ ಇಲಾಖೆಯವರಾದರೂ ಮುನ್ನುಗ್ಗಿ ಕ್ರಮ ಕೈಗೊಂಡು ಜನಗಳಿಗೆ ಖಾಯಿಲೆ ಬಂದ ಮೇಲೆ ಅವಸ್ಥೆ ಪಡುವುದಕ್ಕಿಂತ ಈಗಲೇ ಸರಿಪಡಿಸಬಾರದೇಕೆ? ಹೀಗೆ ಕ್ರಮ ಕೈಗೊಳ್ಳದಿದ್ದಲ್ಲಿ ಸಾಂಕ್ರಾಮಿಕ ರೋಗಗಳ ಏಳಿಗೆಗೆ ಖುದ್ದು ಇವರೇ ಕಾರಣರಾಗುತ್ತಾರೆ. ಇದನ್ನು ಈಗಲಾದರೂ ಅರಿತು ಹೋಟಿಲುಗಳನ್ನು ಚೊಕ್ಕಟವಾಗಿಟ್ಟು ಶುದ್ಧವಾದ ಪದಾರ್ಥಗಳು ದೊರಕುವಂತೆ ಮಾಡಲಿ. ಇದರಿಂದ ಕೋಲಾರ ನಗರದ ಜನರಿಗೇ ಅಲ್ಲದೆ ಪರಸ್ಥಳದಿಂದ ಬರುವವರಿಗೂ ಅನುಕೂಲವಾಗುವುದು.

ತಮ್ಮವ

ಎ. ವೆಂಕಟಗಿರಿ

ಗೌರಿಬಿದನೂರು ತಾಲೂಕು ಗೃಹ ನಿರ್ಮಾಣ ಸಹಕಾರ ಸಂಸ್ಥೆ!

ಕೇಂದ್ರ ಸರಕಾರದ ಅಣತಿಯಂತೆ, ರಾಜ್ಯ ಸರ್ಕಾರಗಳು ಗೃಹ ನಿರ್ಮಾಣ ಯೋಜನೆಯನ್ನು ಕೈಗೊಂಡಿವೆ. ನಮ್ಮ ರಾಜ್ಯದಲ್ಲೂ ಈ ಯೋಜನೆ ಅನುಷ್ಠಾನಕ್ಕೆ ಬರುತ್ತಿದೆ ಆದರೆ ಗೌರಿಬಿದನೂರಿನಲ್ಲಿ ರಚಿತವಾದ ತಾಲ್ಲೂಕು ಗೃಹ ನಿರ್ಮಾನ ಸಹಕಾರ ಸಂಸ್ಥೆಯು ಮುಂದುವರಿಯುವ ರೀತಿ ನೀತಿ ಈ ಯೋಜನೆಯ ಯಶಸ್ಸಿಗೆ ಕಂಟಕಪ್ರಾಯವಾಗುವಂತೆ ಕಾಣಬರುತ್ತಿದೆ.

ಈ ಯೋಜನೆಗೆ ಬೆಂಬಲವಾಗಿ ಗೌರಿಬಿದನೂರಿನ ನಾಗರಿಕರಲ್ಲಿ ಹಲವರು ಈಗಾಗಲೇ ಗೃಹ ನಿರ್ಮಾಣ ಸಹಕಾರ ಸಂಘದ ಷೇರುದಾರರಾಗಿದ್ದಾರೆ. ಸಂಸ್ಥೆ ಸ್ಥಾಪನೆಯಾಗಿ ಒಂದು ತಿಂಗಳಾಗುತ್ತಾ ಬಂದು ಈಗ ತಾನೆ ಅದು ರಿಜಿಸ್ಟ್ರೇಷನಿಗೆ ಹೋಗಿದೆಯಂತೆ. ಸೊಸೈಟಿ ಇನ್‌ಸ್ಪೆಕ್ಟರವರು ಇದನ್ನು ಇಷ್ಟರವರೆಗೆ ತಮ್ಮಲ್ಲಿ ಇಟ್ಟುಕೊಂಡಿದ್ದಕ್ಕೆ ಮೀಟಿಂಗ್‌ಗೆ ಬರದೇ ಇದ್ದವರನ್ನು ಡೈರೆಕ್ಟರರಾಗಿ ತೆಗೆದುಕೊಂಡಿದ್ದಾರೆ ಎಂಬುದೇ ಕಾರಣವಾಗಿದೆಯಂತೆ.

ಹೀಗೆ ಸಣ್ಣಪುಟ್ಟ ಗೊಂದಲವನ್ನೇ ಮುಂದೆ ಮಾಡಿ, ರಿಜಿಸ್ಟ್ರೇಷ್‌ನಿಗೆ ಕಳಿಸದೆ

(೬ನೇ ಪುಟ ನೋಡಿ)

ಬಾಗೇಪಲ್ಲಿ ತಾಲೂಕು

ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನ

ಬಾಗೇಪಲ್ಲಿ ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಪ್ರಥಮ ಸಮ್ಮೇಳನವು ಡಿಸೆಂಬರ್ 14-15ರಂದು ಬಾಗೇಪಲ್ಲಿ ಟಿ. ಬಿ.ಯಲ್ಲಿ ನಡೆಯಿತು. ತಾಲ್ಲೂಕಾದ್ಯಂತ ಸುಮಾರು 100 ಪ್ರತಿನಿಧಿಗಳು ಹಾಜರಾಗಿದ್ದರು. ಸಮ್ಮೇಳನ ಪ್ರಾರಂಭಕ್ಕೆ ಮುಂಚೆ, ಕಾಂ. ಎ ವಿ. ಅಪ್ಪಸ್ವಾಮಿರೆಡ್ಡಿಯವರು ಧ್ವಜಾರೋಹಣ ಮಾಡಿ, ಕೆಂಪು ಧ್ವಜದಡಿಯಲ್ಲಿ, ರೈತರು ಮತ್ತು ಕಾರ್ಮಿಕರು ಹೋರಾಟ ನಡೆಸಿ ತಮ್ಮ ಸ್ವಾತಂತ್ರ್ಯವನ್ನು ಯಾವ ರೀತಿ ರಕ್ಷಿಸಿಕೊಳ್ಳುತ್ತಿದ್ದಾರೆಂದು ಸೂಕ್ಷ್ಮವಾಗಿ ವಿವರಿಸಿದರು.

ನಂತರ, ಕಾಂ. ಹೆಚ್. ಎಸ್. ರಾಮರಾವ್, ಕಾಂ. ಎಂ.ಪಿ. ಆದಿನಾರಾಯಣರೆಡ್ಡಿ ಮತ್ತು ಕಾಂ. ಎ. ವಿ. ಅಪ್ಪಸ್ವಾಮಿರೆಡ್ಡಿಯವರನ್ನೊಳಗೊಂಡ ಅಧ್ಯಕ್ಷ ಮಂಡಲಿಯನ್ನು ಸಮ್ಮೇಳನ ಆಯ್ಕೆ ಮಾಡಿತು.

ಕಾಂ. ಹೆಚ್. ಎಸ್. ರಾಮರಾಯರು ಪ್ರಥಮ ದಿನದ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರಿನ ಕಾರ್ಮಿಕ ನಾಯಕರಾದ ಕಾಂ. ವೈ. ಆರ್. ಸತ್ಯನಾರಾಯಣರವರು ಸಮ್ಮೇಳನವನ್ನು ಉದ್ಘಾಟಿಸುತ್ತ, "ಕಮ್ಯೂನಿಸ್ಟ್ ಪಾರ್ಟಿಯು, ಜನತಾ ಪಾರ್ಟಿಯಾಗಿ ಬೆಳೆಯುತ್ತಿದೆ. ರೈತರು, ಕಾರ್ಮಿಕರು ಮತ್ತು ಬಡ - ಮಧ್ಯಮ ವರ್ಗದವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾದರೆ ತಮ್ಮ ಸಂಘಟನೆ ಮಾಡಲು ಮತ್ತು ನಾಯಕತ್ವ ಕೊಡಲು ಕಮ್ಯೂನಿಸ್ಟ್ ಪಾರ್ಟಿ ಕಡೆಗೆ ನೋಡುತ್ತಿದ್ದಾರೆ. ಈಗ ಪಾರ್ಟಿ ಸದಸ್ಯರ ಜವಾಬ್ದಾರಿ ಹೆಚ್ಚಿದೆ. ಪಾರ್ಟಿಯ ಸದಸ್ಯರ ವೈಯಕ್ತಿಕ ಜೀವನ ಇತರರಿಗೆ ಮಾರ್ಗದರ್ಶಕವಾಗಿರಬೇಕೆಂದೂ, ಮಾರ್ಕ್ಸ್‌ವಾದ - ಲೆನಿನ್‌ವಾದದ ಸಿದ್ಧಾಂತ ರೀತ್ಯ, ಪಾರ್ಟಿ ಸದಸ್ಯರು ಸಂಘಟನೆ ನಡೆಸಬೇಕೆಂದೂ" ತಿಳಿಸಿದರು.

ಪಾರ್ಟಿಯ ವರ್ಚಸ್ಸು ಬೆಳೆಯುತ್ತಿದೆ ಎಂಬುದಕ್ಕೆ, ಜನರು ಪಾರ್ಟಿಯನ್ನು ಪ್ರೀತಿಸುತ್ತಿದ್ದಾರೆಂಬುದಕ್ಕೆ ಕೇರಳದ ಉದಾಹರಣೆಯೊಂದು ಸಾಕೆಂದು ಭಾಷಣಕಾರರು ಹೇಳಿದರು.

ನಂತರ ಸ್ವಾಗತ ಸಮಿತಿ ಕಾರ್ಯದರ್ಶಿ ಕಾಂ. ಡಿ. ಎ. ವೆಂಕಟರೆಡ್ಡಿಯವರು ಕಳೆದ 5 ವರ್ಷಗಳಿಂದಲೂ ಪಾರ್ಟಿಯು ತಾಲ್ಲೂಕಿನಲ್ಲಿ ರೈತರ ಕುಂದುಕೊರತೆಗಳ ಬಗ್ಗೆ ನಡೆಸಿದ ವಿಜಯೀ ಹೋರಾಟಗಳ ಬಗ್ಗೆ ಮತ್ತು ಪಾರ್ಟಿ ಬೆಳೆಸುವುದರ ಬಗ್ಗೆ ಎಂತಹ ಲೋಪದೋಷಗಳು ಕೂಡ ಬಂದಿವೆ ಎಂಬುದನ್ನು ತಮ್ಮ ವರದಿಯಲ್ಲಿ ತಿಳಿಸಿದರು.

ವರದಿಯ ಮೇಲೆ ಚರ್ಚೆ ನಡೆದು 20 ಪ್ರತಿನಿಧಿಗಳು ಭಾಗವಹಿಸಿ ತಮ್ಮ ಸಲಹೆಗಳನ್ನು ಇತ್ತರು.

ನಂತರ ಸಭೆ 15ನೇ ತಾರೀಖಿಗೆ ಮುಂದುವರಿದು, ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಪಿ. ಆದಿನಾರಾಯಣರೆಡ್ಡಿಯವರು ವಹಿಸಿದ್ದರು. ಸುಮಾರು 1 ಘಂಟೆಯ ಕಾಲ ವರದಿಯ ಮೇಲೆ ಚರ್ಚೆ ನಡೆದ ನಂತರ ಸಂಘಟನೆ ಬಗ್ಗೆ ಬಹಳ ಉತ್ತಮ ಸಲಹೆಗಳೊಂದಿಗೆ ವರದಿ ಅಂಗೀಕೃತವಾಯಿತು.

ಆಹಾರಾಭಾವ, ಭೂಸುಧಾರಣೆ ಬಗ್ಗೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪಾನನಿರೋಧ ಶಾಸನ ವಿಫಲತೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ, ಒಡೆದು ಹೋದ ಕೆರೆಗಳನ್ನು ರಿಪೇರಿ ಮಾಡಿಸುವ ಬಗ್ಗೆ, ಬಹುಶೀಕ ಮಂದಿ ತೆಲುಗು ಮಾತನಾಡುವ ಕೋಲಾರ ಜಿಲ್ಲೆಯಲ್ಲಿ ಹಾಗೂ ಬಾಗೇಪಲ್ಲಿ ತಾಲ್ಲೂಕಿನಲ್ಲಿ ತೆಲುಗು ಪ್ರಾಥಮಿಕ ಶಾಲೆಗಳನ್ನು 1958ರ ಪ್ರಾರಂಭದಿಂದ ತೆರೆಯಬೇಕೆಂಬುದರ ಬಗ್ಗೆ, ಕೇರಳ ಸರಕಾರವನ್ನು ಅಭಿನಂದಿಸುವ ಬಗ್ಗೆ ನಿರ್ಣಯಗಳು ಚರ್ಚೆಗೆ ಬಂದು ಸರ್ವಾನುಮತದಿಂದ ಅಂಗೀಕೃತವಾಯಿತು. 50 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

15 ಮಂದಿ ಸದಸ್ಯರನ್ನೊಳಗೊಂಡ ಕಾರ್ಯಕಾರೀ ಸಮಿತಿಯೊಂದನ್ನು ಆಯ್ಕೆ ಮಾಡಿ, ಕಾಂ. ಎ ವಿ. ಅಪ್ಪಸ್ವಾಮಿರೆಡ್ಡಿಯವರನ್ನು ಕಾರ್ಯದರ್ಶಿಯನ್ನಾಗಿಯೂ, ಕಾಂ. ಹೆಚ್. ಎಸ್. ರಾಮರಾವ್ ಮತ್ತು ಕಾಂ. ಡಿ. ಎ. ವೆಂಕಟರೆಡ್ಡಿಯವರನ್ನು ಸಹಕಾರ್ಯದರ್ಶಿಗಳನ್ನಾಗಿಯೂ ಸಮ್ಮೇಳನದಲ್ಲಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಸಂಜೆ 6 ಘಂಟೆಗೆ ಬಾಗೇಪಲ್ಲಿ ಟೌನ ಪ್ರಮುಖ ರಸ್ತೆಗಳಲ್ಲಿ ಪಾರ್ಟಿ ಸದಸ್ಯರ ಭಾರಿ ಮೆರವಣಿಗೆ ನಡೆಯಿತು. ರಾತ್ರಿ 8 ಘಂಟೆಗೆ ಪ್ರಾರಂಭವಾದ ಭಾರಿ ಬಹಿರಂಗ ಸಭೆಗೆ ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷರೂ, ಶಾಸನ ಸಭಾ ಕಮ್ಯೂನಿಸ್ಟ್ ಸದಸ್ಯರೂ ಆದ ಟಿ ಕೆ. ಗಂಗಿರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಗಳಾದ ಹೆಚ್. ಎಸ್. ರಾಮರಾವ್, ಡಿ. ಎ. ವೆಂಕಟರೆಡ್ಡಿ ಮತ್ತು ವೈ. ಆರ್. ಸತ್ಯನಾರಾಯಣರವರು ಭಾಷಣ ಮಾಡಿ, ಸಮ್ಮೇಳನದಲ್ಲಾದ ಗೊತ್ತುವಳಿಗಳನ್ನು ಮಂಡಿಸಿ ಸಭೆಯ ಸಮ್ಮತಿ ಪಡೆದರು.

ನಂತರ ಟಿ. ಕೆ. ಗಂಗಿರೆಡ್ಡಿಯವರು ಮಾತನಾಡಿ, 'ಜತ್ತಿ ಸಮಿತಿ'ಯ ಬಗ್ಗೆ ಪುರೋಗಾಮಿ ತಿದ್ದುಪಡಿ ಹೊಂದುವಂತೆ ಒತ್ತಾಯಪಡಿಸಲು ಕರ್ನಾಟಕ ಪ್ರಾಂತ ರೈತ ಸಂಘದವರು ಪ್ರಕಟಿಸಿರುವ ಮನವಿಗೆ ಸಹಸ್ರಾರು ಸಂಖ್ಯೆಯಲ್ಲಿ ರೈತರು ಸಹಿ ಮಾಡಿ, ಬಹಿರಂಗ ಸಭೆಗಳ ಮೂಲಕ ಠರಾವುಗಳನ್ನು ಮಾಡಿ ಸರ್ಕಾರಕ್ಕೆ ರವಾನಿಬೇಕೆಂದೂ ತಿಳಿಸಿದರು.

ಗೂಳೂರು ಅರುಣಾ ಬುರ್ರ ಕಥಾದಳದವರಿಂದ ಕೇರಳ ಮಂತ್ರಿ, ರೈತ-ಕಾಂಗ್ರೆಸ್ ಮಂತ್ರಿ, ರೈತಪಕ್ಷ ಮುಂತಾದ ರಾಜಕೀಯ ಸಾಂಸ್ಕೃತಿಕ ಪ್ರದರ್ಶನ ನಡೆದು, ಸಭಿಕರ ಮನಸ್ಸನ್ನಾಕರ್ಷಿಸಿತು.

ಬಾಗೇಪಲ್ಲಿ ತಾಲ್ಲೂಕು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎ. ವಿ. ಅಪ್ಪಸ್ವಾಮಿರೆಡ್ಡಿಯವರು ವಂದನಾರ್ಪಣೆ ಮಾಡಿದ ಮೇಲೆ ಜಯಕಾರಗಳೊಂದಿಗೆ ಸಭೆ ಮುಕ್ತಾಯವಾಯಿತು.

ಪ್ರಾಂತೀಯ ಸುದ್ದಿ ಸಂಗ್ರಹ

ಬೆಳಗಾಂ

ಸವದತ್ತಿ ಯಲ್ಲಮ್ಮಾ ಮುನಿಸಿಪಲ್ ನೌಕರರದಾರರ ಪೈಕಿ 20 ಜನರಿಗೆ ಕನಿಷ್ಟ ವೇತನ ಕಾಯ್ದೆಗಿಂತ ಕಡಿಮೆ ವೇತನ ದೊರಕುತ್ತಿದ್ದು, ಅವರಿಗೆ ಪಗಾರವನ್ನು ಹೆಚ್ಚಿಸಬೇಕು. ಯಾವತ್ತೂ ನವಕರದಾರರಿಗೆ ವಾರದಲ್ಲಿ ಒಂದು ದಿವಸ ರಜೆಯನ್ನು ಕೊಡಬೇಕು. ನಾಕಾ ಕಾರಕೂನರು 12 ಘಂಟೆ ದುಡಿಯುತ್ತಿದ್ದು ಅವರಿಗೆ 8 ತಾಸಿನ ಕೆಲಸ ತಕ್ಕೊಳ್ಳಬೇಕು. ಹೆಚ್ಚಿನ ಘಂಟೆಯ ದುಡಿತದ ಪಗಾರವನ್ನು ಕನಿಷ್ಟ ವೇತನ ಕಾಯ್ದೆ ಅಮಲಿನಲ್ಲಿ ಬಂದಾಗಿನಿಂದ (1955) ಕೊಡಬೇಕು. ಹಂಗಾಮಿ ನವಕರದಾರರಿಗೂ ಕನಿಷ್ಟ ವೇತನ ಕಾಯ್ದೆಯ ಪ್ರಕಾರ ಪಗಾರ ಕೊಡಬೇಕು ಟೆಲಿಗ್ರಾಮ್ ನವಕರದಾರರಿಗೆಸಾಯಕಲ್ ಭತ್ತೆ ಕೊಡಬೇಕು. ಮತ್ತು ಮನೆಯಿಲ್ಲದ ನೌಕರರಿಗೆ ಮನೆಗಳನ್ನು ಕಟ್ಟಲು ನೆರವನ್ನು ಕೊಡಬೇಕು.

ಈ ಬೇಡಿಕೆಗಳನ್ನು 19-9-57ಕ್ಕೆ ಸವದತ್ತಿಯಲ್ಲಮ್ಮಾ ಮುನಿಸಿಪಲ್ ಅಧ್ಯಕ್ಷರಲ್ಲಿ ಕೊಟ್ಟಿದ್ದು ಆದೆ. ಈ ವಿಷಯವನ್ನು ಜನರಲ್ ಬೋರ್ಡಿನ ಮುಂದೆ ತರದೇ ಮುಂದೂಡುತ್ತಾ ಸಾಗಿದ್ದು ಆದೆ.

ಈ ಬೇಡಿಕೆಗಳನ್ನು ಮುನಿಸಿಪಾಲ್ಟಿಯವರು ಕೂಡಲೇ ಪೂರೈಸುವಂತೆಸರಕಾರದವರು ಕ್ರಮವೆಸಗಬೇಕು. ಸರಕಾರ ಮಾಡಿದ ಕಾರ್ಮಿಕ ಕಾನೂನುಗಳ ಉಲ್ಲಂಘನೆ ನಡೆಯಲು ಸರಕಾರ ಇನ್ನು ಮುಂದಾದರೂ ಬಿಡಬಾರದು.

ಕೊಡಗು

ಕೊಡಗು ಜಿಲ್ಲೆಯ ಪಿ. ಡಬ್ಲ್ಯು. ಡಿ. ಕೆಲಸಗಾರರ ಸ್ಥಿತಿ ಚಿಂತಾಜನಕವಾಗಿದೆ. ಇಲ್ಲಿಯ ಕೆಲಸಗಾರರಿಗೆ ಎರಡು ಮೂರು ತಿಂಗಳಾದರೂ ಸಂಬಳ ಸಿಗದೆ ಸಂಕಟಪಡಬೇಕಾಗಿದೆ. ಇಲ್ಲಿಯ ಕೆಲ ಓವರ್ಸಿಯರ್ ಮತ್ತು ಸೆಕ್ಷನ್ ಆಫೀಸರು ಹಿಟ್ಲರ್‌ನ ಆಶೀರ್ವಾದವನ್ನು ಪಡೆದವರಂತಿದ್ದಾರೆ. ಕೆಲಸಗಾರರು ಹತ್ತುಹನ್ನೆರಡು ಮೈಲುಗಳ ವರೆಗೆ ನಡೆದು ಹೋಗಿ ಎಂಟು ಘಂಟೆ ಕೆಲಸಮಾಡಿ ವಾಪಾಸ್ಸು ಮನೆಗೆ ಬರಬೇಕಿದೆ. ಈ ರೀತಿಯಲ್ಲಿ ಒಂದು ದಿವಸಕ್ಕೆ ಹದಿನಾಲ್ಕು ಘಂಟೆ ಶ್ರಮಪಡಬೇಕಿದೆ. ಇವರಿಗೆ ಸಿಗುವ ಸಂಬಳ ದಿನಕ್ಕೆ 1-50 ನ ಪೈ ಮಾತ್ರ. ಈ ಸಂಬಳದಿಂದ ಓವರ್ಸಿಯವರಿಗೆ ದಕ್ಷಿಣೆ ಬೇರೆ.

ಈ ಸಂಕಟಗಳಿಂದ ಪಾರಾಗಲು ಎಚ್ಚತ್ತ ಕೆಲಸಗಾರರು ಕೆಲದಿನಗಳ ಹಿಂದೆ ಸಭೆ ಸೇರಿ ಕೊಡಗು ಜಿಲ್ಲಾ ಪಿ.ಡಬ್ಲ್ಯು.ಡಿ. ಕೆಲಸಗಾರರ ಯೂನಿಯನ್ ಸ್ಥಾಪಿಸಿರುವರು. ಕಾರ್ಯದರ್ಶಿಯಾಗಿ ಕೆ.ಯಂ.ಪೊನ್ನಪ್ಪನವರನ್ನು ಚುನಾಯಿಸಿರುತ್ತಾರೆ. ಇನ್ನು ಸ್ವಲ್ಪ ಸಮಯದಲ್ಲಿ ಒಂದು ಜನರಲ್‌ಬಾಡಿ ಮೀಟಿಂಗು,ಕರೆದು ಯೂನಿಯನ್ ರಜಿಸ್ಟರು ಮಾಡುವಂತೆ ತೀರ್ಮಾನಿಸಿರುತ್ತಾರೆ.

ಈ ವಿಷಯವನ್ನು ತಿಳಿದ ಒಬ್ಬ ಓವರ್ಸಿಯರ್‌ವರು ಕೆಲಸಗಾರರ ಮೇಲೆ ಕಿಡಿಕಿಡಿಯಾಗಿ ಯೂನಿಯನ್ ಸದಸ್ಯರೊಳಗೆ ಕೋಮುವಾರು ಭಾವನೆಯನ್ನು ಹ ಡಿ ... ತ್ತಾ ಯೂನಿಯನ್ನು ಸದಸ್ಯರನ್ನು ... ಸುತ್ತಾ ಇದ್ದಾರೆಂದು ವರ್ತಮಾನವಿದೆ.

ಮಜೂರರ ಮೇಲಾಗುತ್ತಿರುವ ದಬ್ಬಾಳಿಕೆಯನ್ನೂ ಮತ್ತು ತಮ್ಮ ಸಂಕಟಗಳನ್ನೂ ಕೊನೆಗಾಣಿಸಬೇಕಾದರೆ ಎಲ್ಲಾ ಕೆಲಸಗಾರರೂ ಯೂನಿಯನ್ ಮೆಂಬರರಾಗಿ ಸಂಘವನ್ನು ಬಲಪಡಿಸಬೇಕಾಗಿದೆ. ಈ ಅಧಿಕಾರಿಗಳ ಬೆದರಿಕೆಗೆ ಹೆದರಿ ಕೂರುವ ಕಾಲ ಸಂದಿದೆ.

ಬೆಂಗಳೂರಿನಲ್ಲಿ ಬಿಶಪರುಗಳ ಸಮ್ಮೇಳನದ ನಿರ್ಣಯ

ರಾಜ್ಯಘಟನೆಯ ಬಹಿರಂಗ ಉಲ್ಲಂಘನೆ

1957ನೇ ನವಂಬರ ತಿಂಗಳಲ್ಲಿ ಬೆಂಗಳೂರಿನಲ್ಲಿ ಭಾರತದ ಕೆಥೋಲಿಕ್ ಬಿಶಪರುಗಳ ಸಮ್ಮೇಳನವು ಜರಗಿ ಸ್ವೀಕರಿಸಿದ ನಿರ್ಣಯ 20-11-57ನೇ "ಪ್ರಜಾವಾಣಿ"ಯಲ್ಲೂ, 19-11-57ನೇ "ನವಭಾರತ"ದಲ್ಲೂ ಪ್ರಕಟವಾಗಿದೆ. ಈ ನಿರ್ಣಯದಲ್ಲಿ "ಕೆಥೋಲಿಕರು ಕಮ್ಯೂನಿಸ್ಟರಿಗೆ ಬೆಂಬಲ ಕೊಟ್ಟರೆ, ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದರೆ ಮತದಿಂದ ಹೊರಹಾಕಲಾಗುವುದೆಂದು ಎಚ್ಚರಿಸಲಾಗಿದೆ" ಎಂದು ವರದಿಯಾಗಿದೆ.

ಇದೀಗ ನಮ್ಮ ಭಾರತವೆಂಬುದು ಜಾತ್ಯಾತೀತ ರಾಷ್ಟ್ರವಾಗಿದ್ದು, ಸರ್ವ ಧರ್ಮಗಳಿಗೂ ಧರ್ಮ ಪ್ರಚಾರಕ್ಕೂ ಸ್ವಾತಂತ್ರ್ಯವಿದೆ. ಹಾಗೆಯೇ ತನಗೆ ಸರಿಕಂಡ ರಾಜಕೀಯದಲ್ಲಿ ದುಡಿಯಲು, ಸದಸ್ಯರಾಗಲು, ಬೆಂಬಲ ಕೊಡಲು ಸ್ವಾತಂತ್ರ್ಯವು ನಾಗರಿಕರಿಗೆ ಇದೆ. ಅಲ್ಲದೆ ಒಬ್ಬ ವ್ಯಕ್ತಿಯನ್ನು ಒಂದು ಜಾತಿಯಿಂದ ಹೊರಹಾಕುವುದನ್ನು ಅವಮಾನಿಸುವುದನ್ನು ನಮ್ಮ ರಾಜ್ಯ ಘಟನೆ ವಿರೋಧಿಸಿದೆ. ಇಂಥಾ ಕೃತ್ಯ ಕೈಕೊಂಡವರಿಗೆ ಶಿಕ್ಷೆ ಕೊಡಲು ರಾಜ್ಯಘಟನೆ ಬದ್ಧವಿದೆ.- ಇದು ಘಟನಾಬದ್ಧವಾದ ಹಕ್ಕು

ಹೀಗಿರುವಾಗ ಈ ಧಾರ್ಮಿಕ ಮುಂದಾಳುಗಳು ಜಾತಿಯಿಂದ ಹೊರಹಾಕುವ ಬೊಬ್ಬೆ ಹಾಕುವುದರ ಅರ್ಥವೇನು? ಸ್ವಾತಂತ್ರ್ಯ ಸಿಗುವ ಮೊದಲು, ಕಾಂಗ್ರೆಸಿಗೆ ಬೆಂಬಲ ಕೊಡಕೂಡದೆಂದು ಬೊಬ್ಬೆ ಹೊಡೆದು ರಾಷ್ಟ್ರೀಯ ಹೋರಾಟವನ್ನೇ ಈ ಮತಾಧಿಕಾರಿಗಳು ವಿರೋಧಿಸಿದ್ದು ಇಂದಿಗೂ ನೆನಪಿದ್ದ ವಿಚಾರ. ಆದರೂ ಇನ್ನು ಈ ದ್ವಿಮುಖ ಧೋರಣೆ ಸರಿಯಲ್ಲ

(೬ನೇ ಪುಟ ನೋಡಿ)

ಮುಖ್ಯಮಂತ್ರಿಗಳಿಗೆ ಪ್ರಾಂತ ರೈತ ಸಂಘದ ಮನವಿಗಳು

ಕರ್ನಾಟಕ ಪ್ರಾಂತ ರೈತ ಸಂಘದ ಪರವಾಗಿ ಕಾರ್ಯದರ್ಶಿ ಬಿ. ವಿ. ಕಕ್ಕಿಲ್ಲಾಯ, ಶ್ರೀ ಎನ್. ಎಲ್. ಉಪಾಧ್ಯಾಯ ಮತ್ತು ಶ್ರೀ ಎಂ. ಸಿ. ನರಸಿಂಹನ್ ಎಂ. ಎಲ್. ಎ. ಇವರು ತಾ. 20 ರಂದು ಮೈಸೂರು ಮುಖ್ಯ ಮಂತ್ರಿಯವರಿಗೆ ಮೂರು ಮನವಿಗಳನ್ನು ಅರ್ಪಿಸಿದ್ದಾರೆ.

● ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಲ್ಲ ತಯಾರಿಸುವುದಕ್ಕೆ ತಾಳೆಮರಗಳಿಂದ ಸಿಹಿ ಹೆಂಡ ಇಳಿಸುವ ಮೂರ್ತೆದಾರರಿಂದ ಸಹಕಾರ ಸಂಘಗಳ ಹೆಸರಿನಲ್ಲಿ ಕಮಿಷನ್ ಮತ್ತು ಹುಂಡಿ ವಸೂಲು ಮಾಡುವ ಕ್ರಮವನ್ನು ರದ್ದು ಮಾಡಬೇಕು: ಹೊಸತಾಗಿ ಆರಂಭಿಸಿರುರ ತಾಳೆ ಮರಗಳಿಗೆ ನಂಬರು ಹಾಕುವ ಕ್ರಮುವನ್ನು ರದ್ದು ಮಾಡಬೇಕು; ಲೈಸನ್ಸು ಇಲ್ಲದೆ ಮೂರ್ತೆ ಮಾಡಿದರೆಂಬ ಆಪಾದನೆಯ ಮೇಲೆ ಬೊಂಡಂತಿಲ ಗ್ರಾಮದ 17 ಮೂರ್ತೆದಾರರ ಮೇಲೆ ಹಾಕಲಾಗಿರುವ ಕಟ್ಲೆಗಳನ್ನು ವಾಪಾಸು ತೆಗೆದುಕೊಳ್ಳಬೇಕು ಎಂಬಿತ್ಯಾದಿ ಕೇಳಿಕೆಗಳನ್ನು ಸರಕಾರದ ಮುಂದಿಡಲಾಗಿದೆ.

● ಗುಲ್ಬರ್ಗ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಬೆಳೆ ಕೆಟ್ಟಿರುವುದನ್ನು ಗಮನಿಸಿ ಹೈದರಾಬಾದು ಸರಕಾರವು ಭೂಕಂದಾಯ ವಸೂಲಿಯನ್ನು ಮನ್ನ ಮಾಡಿತ್ತು. ಈಗ ಹಳೆಯ ಬಾಕಿಯನ್ನೆಲ್ಲ ವಸೂಲು ಮಾಡಲು ಮೈಸೂರು ಸರಕಾರ ಆಜ್ಞೆ ಹೊರಡಿಸಿದೆ. ಹೈದರಬಾದು ಸರಕಾರದ ನಿಯಮದಂತೆ ಮತ್ತು ಈ ವರ್ಷವೂ ಬೆಳೆ ಕೆಟ್ಟಿರುವುದನ್ನು ಗಮನಿಸಿ, ಹಳೆಯ ಬಾಕಿ ಭೂಕಂದಾಯವನ್ನು ವಸೂಲಿ ಮಾಡುವುದನ್ನು ಕೂಡಲೆ ನಿಲ್ಲಿಸಬೇಕು. ಹಳೆಯ ಕಂದಾಯ ಬಾಕಿಯನ್ನು ಸಂಪೂರ್ಣ ರದ್ದುಮಾಡಬೇಕು ಎಂದು ವಿನಂತಿಸಲಾಗಿದೆ.

● ಹಳೆಯ ಮದ್ರಾಸು, ಮೈಸೂರು, ಕೊಡಗು ರಾಜ್ಯಗಳಿಗೆ ಸೇರಿದ ಪ್ರದೇಶಗಳಲ್ಲಿ ನ್ಯಾಯ ಗೇಣಿ ನಿರ್ಣಯದ ಕಾನೂನುಗಳಿವೆಯಾದರೂ, ಪ್ರತಿಯೊಬ್ಬ ರೈತನೂ ಗೇಣಿ ಕೋರ್ಟುಗಳಿಗೆ ಹೋಗಿ ತಾನು ತೆರತಕ್ಕ ನ್ಯಾಯ ಗೇಣಿಯನ್ನು ನಿರ್ಣಯಿಸಿಕೊಳ್ಳಬೇಕಾಗಿದೆ. ಹಳೆಯ ಮೈಸೂರು ಪ್ರದೇಶದಲ್ಲಿ ಕೋರ್ಟಿಗೆ ಅರ್ಜಿ ಸಲ್ಲಿಸುವುದರ ಜೊತೆಯಲ್ಲಿ ಮತ್ತು ಅದು ತೀರ್ಮಾನವಾಗುವ ತನಕ ಹಿಂದಿನ ಅಧಿಕ ದರದ ಗೇಣಿಯನ್ನೆ ಕೋರ್ಟಿನಲ್ಲಿ ಠೇವು ಇಡಬೇಕು. ಇದರಿಂದ ಕಾನೂನುಗಳು ಪ್ರಯೋಜನಕ್ಕೆ ಬಾರದೆ ಹೋಗುತ್ತವೆ. ಬೊಂಬಯಿಯಲ್ಲಿರುವಂತೆ ಮೈಸೂರಲ್ಲೂ ತಹಸಿಲ್ದಾರರು ಅಥವ ಅಮಲ್ದಾರರು ಪ್ರತಿ ವರ್ಷವೂ ಒಂದೊಂದು ಪ್ರದೇಶದಲ್ಲಿ ಒಂದೊಂದುತರದಜಮೀನಿನ ಮಟ್ಟಿಗೆ ಎಕ್ರೆ ಒಂದರ ಉತ್ಪತ್ತಿ ಎಷ್ಟೆಂದು ಪ್ರಕಟಿಸುವ ಅಧಿಕಾರ ಕೊಡುವಂಥ ಸುಗ್ರೀವಾಜ್ಞೆ ಹೊರಡಿಸಬೇಕೆಂದು ಮನವಿ ಮಾಡಲಾಗಿದೆ.

ಕಲ್ಕತ್ತದಲ್ಲಿ ಭಾರತೀಯ ಲೇಖಕರ ಸಮ್ಮೇಳನ

ಕಲ್ಕತ್ತದಲ್ಲಿ ಡಿಸೆಂಬರ್ 23ರಂದು ಆರಂಭವಾದ ಮೂರು ದಿನಗಳ ಸಮ್ಮೇಳನದಲ್ಲಿ ಭಾರತದ ಮೂಲೆ ಮೂಲೆಗಳಿಂದ ಪ್ರತಿಭಾವಂತ ಲೇಖಕ ಪ್ರತಿನಿಧಿಗಳೂ ಬಂದಿದ್ದರು. ವಿದೇಶಗಳಿಂದ ಸೌಹಾರ್ದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸಮ್ಮೇಳನದ ಉದ್ಘಾಟನೆಯನ್ನು ರಾಜಾಜಿಯವರು ಮಾಡಬೇಕಾಗಿದ್ದು ಅವರು ಉಪಸ್ಥಿತರಾಗಿಲ್ಲದ ಕಾರಣ, ಉತ್ತರ ಪ್ರದೇಶದ ಲೇಖಕಿ ಶ್ರೀಮತಿ ಮಹಾದೇವಿ ವರ್ಮಾರವರಿಂದ ಉದ್ಘಾಟಿಸಲ್ಪಟ್ಟಿತು.

ರಾಜಾಜಿಯವರು ಕಳಿಸಿದ ಸಂದೇಶದಲ್ಲಿ, ಲೇಖಕರ ಕರ್ತವ್ಯಗಳನ್ನು ವಿವರಿಸುತ್ತಾ, ಲೇಖಕರು ಪರಂಪರಾಗತವಾಗಿ ಬಂದಿರುವ ವಿಚಾರಧಾರೆಯ ಬಂಧನ ಮತ್ತು ಭಯದಿಂದ ವಿಮುಕ್ತರಾಗಬೇಕೆಂದು ಅವರು ಹೇಳಿದ್ದಾರೆ.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಪ್ರೊಫೆಸರ್ ಹುಮಾಯೂನ್ ಕಬೀರ್ ರವರು, ಪ್ರತಿನಿಧಿಗಳನ್ನು ಸ್ವಾಗತೀಕರಿಸಿದರು. ಲೇಖಕರು ವಿವಿಧತೆಯಲ್ಲೂ ಏಕತೆಯನ್ನು ತರಬೇಕು ಎಂದು ಪ್ರೊ. ಕಬೀರ್‌ರವರು, ಉದ್ಘಾಟಕರಾದ ಶ್ರೀಮತಿ ಮಹಾದೇವಿ ವರ್ಮಾರವರು ಕೂಡಾ ಒತ್ತಿ ಹೇಳಿದರು.

ಡಾಂಗೆಯವರ ಉತ್ತರ....
(3ನೇ ಪುಟದಿಂ)

ಯೋಜನೆಯಡಿಯಲ್ಲಿನ ಕೆಲವು ಸಣ್ಣ ಪುಟ್ಟ ಯೋಜನೆಗಳನ್ನು ಪೂರೈಸುವಲ್ಲಿ, ರಾಜ ಸರ್ಕಾರಗಳು ಮತ್ತು ಖಾಸಗಿ ಮಾಲಿಕರೂ ಕಾರ್ಮಿಕರ ಹಿತವನ್ನು ಕಡೆಗಣಿಸಲು ಯತ್ನಿಸಿದ್ದಾರೆ. ಆದಕಾರಣ ಕಾರ್ಮಿಕರಿಗೆ ಇಬ್ಬಗೆಯ ಕರ್ತವ್ಯವಿದೆ: ಒಂದು ದೇಶದತ್ತ, ಇನ್ನೊಂದು ತಮ್ಮತಮ್ಮ ವರ್ಗದತ್ತ. ಅಂದರೆ ಯೋಜನೆಯ ಪೂರೈಕೆಯಲ್ಲಿ ಸಹಾಯವೀಯುವುದು ಮತ್ತು ಗುತ್ತೇದಾರಿ ಬಂಡವಾಳ ಮತ್ತವರ ಬೆಂಬಲಿಗರಿಂದ ಬರುವ ವಿರೋಧಿಗಳಿಂದ ಯೋಜನೆಯನ್ನು ರಕ್ಷಿಸುವುದು. ಅದೇ ಹೊತ್ತಿನಲ್ಲಿ ಯೋಜನೆಯ ಲಾಭವನ್ನು ಶೋಷಕರು ಉಪಯೋಗಿಸಿಕೊಳ್ಳದಂತೆ ನೋಡುವುದು ; ಇದರಿಂದಾಗಿ, ವೇತನದಲ್ಲಿ ಹೆಚ್ಚುವರಿ ಹಾಗೂ ಉತ್ತಮ ಜೀವನಮಟ್ಟ ಮತ್ತು ಉದ್ಯೋಗಗಳ ಮೂಲಕ, ಕಾರ್ಮಿಕರ ಮತ್ತು ದುಡಿಯುವ ಜನತೆಯ ಇತರ ವಿಭಾಗಗಳ ಹಿತರಕ್ಷಣೆಯನ್ನು ಮಾಡಲು ಸಾಧ್ಯ.

REG. No. M. 6867

Edited Printed and Published by C. R. Krishna Rao, at Janashakthi Printer
L—59, K. V. Temple St., Sultanpet Bangalore—2 phones 3810